# ಎಂಬತ್ನಾಲ್ಕನೇ ವಯಸ್ಸಿನಲ್ಲಿ ಗುರುಗಳು




ಗುರುಗಳು ಏನು ಎಂಬುದಕ್ಕೆ ಕೆಲವು ವ್ಯಕ್ತಿನಿಷ್ಠ ಅಭಿಪ್ರಾಯಗಳಿವೆ. ಯಾರೂ ಅದರ ಬಗ್ಗೆ ನಿರ್ಧಾರಾತ್ಮಕರಾಗಲು ಸಾಧ್ಯವಿಲ್ಲ. 84ರ ವಯಸ್ಸಿನಲ್ಲಿ ಗುರುಗಳ ಆರೋಗ್ಯ ಈ ಹಿಂದೆ ಇದ್ದ ಹಾಗೆ ಇಲ್ಲ. ತಮ್ಮ ಕೆಲಸಗಳ ಮಧ್ಯೆ ವಿಶ್ರಾಂತಿ ತೆಗೆದುಕೊಳ್ಳುತ್ತಾ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಬಹಳ ಜಾಗರೂಕತೆಯಿಂದ ಸಂರಕ್ಷಿಸಿಕೊಳ್ಳುತ್ತಾರೆ. ಹಾಗೂ ಒತ್ತಡಕ್ಕೊಳಗಾಗದಂತೆ ಪ್ರಾಶಸ್ತ್ಯಕ್ಕೆ ಅನುಗುಣವಾಗಿ ತಮ್ಮ ಸಮಯ ಹಾಗೂ ಶಕ್ತಿಯನ್ನು ಮೀಸಲಿಡುತ್ತಾರೆ. ದಿನದ ಕೊನೆಯಲ್ಲಿ ಯಾವ ಕೆಲಸವೂ ಬಾಕಿಯಿರುವುದಿಲ್ಲ ಹಾಗೂ ಆಡಳಿತಾತ್ಮಕ ಕೆಲಸ ಕುರಿತಾಗಲಿ ಅಥವಾ ಯಾವುದೇ ಅಭ್ಯಾಸಿಯ ಯಾತನೆಯ ಕರೆಯ ಇ-ಮೇಲ್‌ಗಾಗಲಿ ಅದೇ ದಿನವೇ ಅವರು ಪ್ರತ್ಯುತ್ತರ ಕೊಡುವ ರೀತಿಯನ್ನು ನೋಡಿದರೆ ನಮಗೆ ಆಶ್ಚರ್ಯವೆನಿಸುತ್ತದೆ.

ಗುರುಗಳು ನಗುನಗುತ್ತಲೇ ವಿವಿಧ ಚಿಕಿತ್ಸೆಗಳಿಗೆ ಹಾಗೂ ಔಷಧೋಪಚಾರಗಳಿಗೆ ಒಳಪಡುತ್ತಾರೆ, ಕೆಲವೊಮ್ಮೆ ಅವರನ್ನು ಚಿಕಿತ್ಸೆ ಮಾಡುವವರನ್ನು ಸಂತೋಷಪಡಿಸುವುದಕ್ಕಾಗಿಯೇನೋ ಅನಿಸುತ್ತದೆ. ತೀಕ್ಷ್ಣವಾದ ಬೆಳಕನ್ನು ಅವರಿಂದ ಸಹಿಸಲಾಗದ ಕಾರಣದಿಂದ ದಿನದ ವೇಳೆ ಅವರು ಕಪ್ಪು ಕನ್ನಡಕವನ್ನು ಧರಿಸಿರುತ್ತಾರೆ. ಸೋ. ಸತ್‌ಬೀರ್ ಹಾಗೂ ಗುರುಗಳ ಮೊಮ್ಮಗನಾದ ಭಾರ್ಗವ ಇವರು ಗುರುಗಳಿಗೆ ಇ-ಮೇಲ್‌ಗಳನ್ನು ನೋಡುವುದರಲ್ಲಿ ಹಾಗೂ ಅವುಗಳಿಗೆ ಪ್ರತ್ಯುತ್ತರ ನೀಡುವುದರಲ್ಲಿ ಸಹಾಯ ಮಾಡುತ್ತಾರೆ. ಅವರ ಕಣ್ಣ ದೃಷ್ಟಿಯು ಪರಿಣಾಮಕ್ಕೊಳಗಾಗಿದ್ದರೂ, ಅವರ ಒಳಗಿನ ಶಕ್ತಿಗಳು ಹಿಂದಿನಂತೆಯೇ ಗರಿಷ್ಠ ಪ್ರಮಾಣದಲ್ಲಿವೆ. ಪ್ರತಿಯೊಬ್ಬರನ್ನೂ ನೋಡುವುದಕ್ಕಿಂತ ಅವರು ಅವರೆಲ್ಲರೂ ಅಲ್ಲಿರುವುದನ್ನು ಗ್ರಹಿಸುತ್ತಾರೆ. ಗುರುಗಳ ಆಹಾರ ಕ್ರಮವು ಬಹು ವಿರಳ. ಏಕೆಂದರೆ ಅನೇಕ ಆಹಾರ ಪದಾರ್ಥಗಳನ್ನು ಅವರಿಗೆ ಬೇಡವೆನ್ನಲಾಗಿದೆ. ಆದರೆ ಅವರು ಭೋಜನಕ್ಕೆ ಊಟದ ಮೇಜಿನಲ್ಲಿ ಯಾವಾಗಲೂ ಕೆಲವು ಅಭ್ಯಾಸಿಗಳೊಂದಿಗೆ ಒಬ್ಬ ಸಾಮ್ರಾಟನಂತೆ ಕುಳಿತುಕೊಳ್ಳುತ್ತಾರೆ. ಅವರು ಮೌನವಾಗಿ ಸೇವಿಸುತ್ತಾರೆ(ಅಲ್ಲಿರುವವರ ಮೇಲೆ ಕೆಲಸ ಮಾಡುತ್ತಿರುತ್ತಾರೇನೋ) ಮತ್ತು ಕೆಲವೊಮ್ಮೆ ಚುರುಕಾದ ಚರ್ಚೆಗಳಿರುತ್ತವೆ. ಅವರನ್ನು ಯಾರಾದರೂ ಪ್ರಚೋದಿಸುವವರಿದ್ದರೆ ಅರ್ಥವತ್ತಾದ ಹಾಗೂ ವಿನೋದದ ಪ್ರತ್ಯುತ್ತರ ತುಂಬಿದ ಹಾಸ್ಯ ಪ್ರಸಂಗಗಳೂ ಇರುತ್ತವೆ.

ಗುರುಗಳ ಕಾಲ್ನಡಿಗೆಗಳು ಅನಿಯಮಿತ, ಆದರೆ ತಮ್ಮ ಕೋಣೆಯಲ್ಲಿರುವ ವಾಕರ್‌ನಲ್ಲಿ ವ್ಯಾಯಾಮ ಮಾಡುತ್ತಾರೆ. ಯಾವಾಗ ಅವರ ದೈಹಿಕ ಶಕ್ತಿಯು ಕಡಿಮೆಯಾಗುತ್ತದೆಯೊ, ಡಾ. ಮೋಹನ್‌ಸೆಲ್ವನ್ ಅವರನ್ನು, ಅವರ ವಿಸ್ಮಯಕರ ಯಂತ್ರದ ಮೂಲಕ ಅದನ್ನು ಮತ್ತೆ ಚುರುಕುಗೊಳಿಸಲು ಆಹ್ವಾನಿಸಲಾಗುತ್ತದೆ. ಗುರುಗಳು ಆಗಾಗ ಸಹಜ್ ಮೆಡಿಕಲ್ ಸೆಂಟರ್‌ನ ದಂತವೈದ್ಯರೊಂದಿಗೆ ಸಮಯ ಕಳೆಯುತ್ತಾರೆ. ಆದರೆ ಅವರ ಆರೋಗ್ಯದ ತೊಂದರೆಗಳಿಗೆ ಅವರೆಂದಿಗೂ ಅಷ್ಟಾಗಿ ಏನನ್ನೂ ಮಾಡುವುದಿಲ್ಲ ಹಾಗೂ ಅವರು ಅವರ ನೋವುಗಳೊಂದಿಗೆ ಹೋರಾಡುತ್ತಿರುವಾಗಲೂ ನಗಿಸುವುದರಲ್ಲಿ ಮೊದಲಿಗರಾಗಿರುತ್ತಾರೆ. ಮಿಷನ್ನಿನ ಅಧ್ಯಕ್ಷರಾಗಿರುವುದರಿಂದ ಸಂಸ್ಥೆಯ ದಿನೇ ದಿನೇ ಹೆಚ್ಚಾಗುತ್ತಿರುವ ಬೆಳವಣಿಗೆಯು ಗುರುಗಳ ಕೆಲಸ ಮತ್ತು ಜವಾಬ್ದಾರಿಗಳನ್ನು ಅನೇಕ ಪಟ್ಟು ಹೆಚ್ಚು ಮಾಡಿದೆ. ಅವರನ್ನು ಭೇಟಿ ಮಾಡಲು ಹವಣಿಸುತ್ತಿರುವ ಅಭ್ಯಾಸಿಗಳನ್ನು ಭೇಟಿ ಮಾಡಲು, ಸ್ವಾಗತಿಸಲು ಹಾಗೂ ಮಾತನಾಡಿಸಲು ಅವರ ಗಾಲ್ಫ್ ಗಾಡಿಯಲ್ಲಿ ಒಂದು ಸುತ್ತು ಹೋಗಿ ಅದನ್ನು ನಿರ್ವಹಿಸುತ್ತಾರೆ. ಗುರುಗಳು ಮಣಪಾಕ್ಕಂ, ತಿರುಪ್ಪೂರ್ ಅಥವಾ ಕೊಲ್ಕತ್ತಾದಲ್ಲಿದ್ದಾಗ ಭಾರತದ ವಿವಿಧ ಕೇಂದ್ರಗಳ ಅಭ್ಯಾಸಿಗಳನ್ನು ಅಲ್ಲಿಗೆ ಬಂದು, ಕೆಲ ದಿನಗಳು ತಂಗಲು ಉತ್ತೇಜಿಸಲಾಗುತ್ತದೆ. ಅಭ್ಯಾಸಿಗಳ ದೊಡ್ಡ ಗುಂಪಿನೊಂದಿಗೆ ನಮ್ಮ ಆಶ್ರಮಗಳಲ್ಲಿರಲು ಅವರು ಆನಂದಿಸುತ್ತಾರೆ ಹಾಗೂ ಮತ್ತೆ ಮತ್ತೆ ಸತ್ಸಂಗಗಳನ್ನು ನಡೆಸಲು ಅವರು ಇಷ್ಟಪಡುತ್ತಾರೆ.

ಗುರುಗಳಿಂದ ನಿರ್ಮಿತವಾಗಿರುವ ಒಮೇಗಾ ಸ್ಕೂಲ್, ಸತ್ಖೋಲ್ ಆಶ್ರಮ, ಕ್ರೆಸ್ಟ್ ಹಾಗೂ ಪುನಃಶ್ಚೇತನ ಕೇಂದ್ರಗಳಿಗೆ, ಭಾರತದ ಎಲ್ಲೆಡೆ ಇರುವ ಪ್ರಮುಖ ಆಶ್ರಮಗಳಿಗೆ ಹಾಗೂ ಕೇಂದ್ರಗಳಿಗೆ ಎಷ್ಟು ಬೇಕೋ ಅಷ್ಟೇ ಗಮನ ಬೇಕಾಗಿದೆ. ಅವರ ತೀವ್ರ ಭೌತಿಕ ಅನಾನುಕೂಲತೆಯ ಹೊರತಾಗಿಯೂ ಅವೆಲ್ಲವುಗಳನ್ನು ಭೇಟಿ ನೀಡುವಲ್ಲಿ ಸಮಯ ನಿರ್ವಹಣೆ ಮಾಡುತ್ತಾರೆ. ಎಷ್ಟಾದರೂ ಸುದೀರ್ಘವಾದ ವಿಮಾನ ಯಾನಗಳಲ್ಲಿ ಅವರಿಗೆ ಕುಳಿತುಕೊಳ್ಳಲು ಸಾಧ್ಯವಾಗದಿರುವ ಕಾರಣ ಹೊರದೇಶಗಳಿಗೆ ಭೇಟಿ ನೀಡುವುದನ್ನು ನಿಲ್ಲಿಸಿದ್ದಾರೆ. ಭಾರತದಲ್ಲಿ ಆದಷ್ಟು ರಸ್ತೆ ಮಾರ್ಗದಲ್ಲಿ ಪ್ರಯಾಣಿಸುವುದಕ್ಕೆ ಆದ್ಯತೆ ನೀಡುತ್ತಾರೆ.

ಗುರುಗಳು ಮಕ್ಕಳಿಗೆ ವಿಶೇಷವಾದ ಗಮನವನ್ನು ಹರಿಸುತ್ತಾರೆ. ಒಮೇಗಾ ಶಾಲೆಯ ಮಕ್ಕಳಿರಬಹುದು, ಅಭ್ಯಾಸಿ ಪೋಷಕರೊಂದಿಗೆ ಬಂದಿರುವ ಮಕ್ಕಳಿರಬಹುದು, ಅವರು ಅವರೊಂದಿಗೆ ಮಾತನಾಡಲು ನಿಲ್ಲುತ್ತಾರೆ, ಪುಟ್ಟ ಕಂದಮ್ಮಗಳಿಗೆ ಹೆಸರಿಡುತ್ತಾರೆ, ಸ್ವಲ್ಪ ದೊಡ್ಡವರ ತಲೆಯನ್ನು ತಮ್ಮ ನಡಿಗೆಯ ಕೋಲಿನಿಂದ ಮುಟ್ಟುತ್ತಾ ಹಾಸ್ಯ ಮಾಡುತ್ತಾರೆ.

ಈಗಾಗಲೇ ಹೊಸ ಪೀಳಿಗೆಯು ಮುನ್ನುಗ್ಗುತ್ತಿದೆ. 25 ವರ್ಷಗಳಲ್ಲಿ ಸುಮಾರು ಎರಡು ಸಾವಿರ ವಿವಾಹಗಳನ್ನು ಗುರುಗಳು ನಡೆಸಿಕೊಟ್ಟಿದ್ದಾರೆ, ಅವರಿಗೆ ಧನ್ಯವಾದಗಳು.

ಗುರುಗಳು ಬಹಳ ಚುರುಕು, ವಿನೋದಶೀಲರು ಹಾಗೂ ಉತ್ಸಾಹದಲ್ಲಿ ಇನ್ನೂ ತರುಣರು, ಹಾಗೂ ಅವರ ನೆನಪಿನ ಶಕ್ತಿಯಂತೂ ಎಂದಿನಂತೆ ಅದ್ಭುತ. ಅವರು ಸ್ವಲ್ಪ ದಾಡಿಯನ್ನು ಬೆಳೆಸಿದ್ದಾರೆ, ಆದರೆ ಅದು ಬಾಬೂಜಿಯವರದಕ್ಕಿಂತ ಚಿಕ್ಕದಾಗಿದೆ. ಆರಂಭದಲ್ಲಿ ಇದರಿಂದ ನಮ್ಮಲ್ಲಿ ಕೆಲವರು ಕುಗ್ಗಿ ಹೋಗಿದ್ದೆವು, ಆದರೆ ಈಗ ಅವರು ಮೊದಲಿನಷ್ಟೇ ಆಕರ್ಷಣೀಯವಾಗಿರುವುದನ್ನು ಕಂಡುಕೊಂಡೆವು. ಬಹಳ ಹಿಂದೆ ನನಗೆ ಗುರುಗಳು ಹೇಳಿದ್ದರು. ಏನೆಂದರೆ ಅವರು ಯುವಕರಾಗಿದ್ದಾಗ ಅವರ ಸಂಬಂಧಿಯೊಬ್ಬರು ಯಾವಾಗಲೂ ಅವರಿಗೆ ಹೇಳುತ್ತಿದ್ದರಂತೆ "ನಿನ್ನಲ್ಲಿ ಭಗವಂತ ಶ್ರೀ ಕೃಷ್ಣನಲ್ಲಿರುವ ಕೆಲವು ಅಂಶಗಳಿವೆ. ನಿನ್ನ 90ನೇ ವಯಸ್ಸಿನಲ್ಲಿಯೂ ಕೂಡ ಆಕರ್ಷಣೀಯವಾಗಿ ಇರುತ್ತೀಯ". ನಿಜವಾಗಿಯೂ ಪ್ರತಿಯೊಬ್ಬರೂ ಶೇಕ್‌ಸ್ಪಿಯರ್‌ನ "ವಯಸ್ಸು ಎಂದಿಗೂ ಬಾಡುವುದಿಲ್ಲ, ಸಂಪ್ರದಾಯವು ಹಳೆಯದಾಗುವುದಿಲ್ಲ, ನಿಮ್ಮದು ಅಪಾರ ವೈವಿಧ್ಯಮಯ" ಎಂಬ ಉಲ್ಲೇಖವನ್ನು ಹೇಳುವ ಪ್ರೇರಣೆಗೆ ಒಳಗಾಗುವರು.

ಸೋ. ಎ.ಪಿ. ದೊರೈ







# ಗುರುಗಳ ಜೀವನದಲ್ಲಿ ಒಂದು ದಿನ

ಗುರುಗಳ ಮೊಮ್ಮಗಳಾದ ಮಾಧುರಿ ಅವರು ಬಹಳ ಹತ್ತಿರದಿಂದ ನೋಡಿರುವ ಗುರುಗಳ ದಿನದ ನಿತ್ಯಕ್ರಮವನ್ನು ಈ ರೀತಿಯಾಗಿ ಸಂಕ್ಷೇಪಿಸಿದ್ದಾರೆ.










ಸಾಮಾನ್ಯವಾದ ದಿನ, ಬೆಳಿಗ್ಗೆ 4.30– ಅನೇಕ ತೊಂದರೆಗಳಿಂದ ತುಂಬಿದ ರಾತ್ರಿಯ ನಿದ್ರೆಯಿಂದ ಬೆಳಗಾಗುತ್ತಲೇ ಗುರುಗಳು ಏಳುತ್ತಾರೆ. ತಕ್ಷಣವೇ ಧ್ಯಾನ ಆರಂಭಿಸುವ ಅವರು ಅದಕ್ಕಾಗಿ ಕೆಲಕ್ಷಣಗಳಲ್ಲಿಯೇ ಸಿದ್ಧರಾಗುತ್ತಾರೆ.

ಬೆಳಿಗ್ಗೆ 5.30– ಧ್ಯಾನ ಮುಗಿಸಿದ ಸ್ವಲ್ಪ ಹೊತ್ತಿನಲ್ಲಿಯೇ ಅವರು ಕಾಫಿ ತೆಗೆದುಕೊಳ್ಳುವುದಕ್ಕಾಗಿ ಹಾಗೂ ಬೆಳಗಿನ ಹಗುರಾದ, ಮೆಲುಗಾಳಿಯನ್ನು ಸವಿಯುವುದಕ್ಕಾಗಿ ವೆರಾಂಡಕ್ಕೆ ಬರುತ್ತಾರೆ. ಅಷ್ಟರಲ್ಲೇ ಅಭ್ಯಾಸಿಗಳೂ ಸಹ ಎದ್ದು, ಸಿದ್ಧರಾಗಿ, ಅವರಿಗಾಗಿ ನಿರೀಕ್ಷೆ ಮಾಡುತ್ತಾ ಹಾಗೆಯೇ ನಿಧಾನವಾಗಿ ಒಳಬರಲು ಶುರುಮಾಡುತ್ತಾರೆ, ಅವರ ಪ್ರಣಾಮಗಳಿಗೆ ಸಂತೋಷದಿಂದ ಸ್ಪಂದಿಸುತ್ತಾ ಅವರನ್ನು ಪಕ್ಕದಲ್ಲಿ ಕುಳಿತುಕೊಳ್ಳಲು ಸ್ವಾಗತಿಸುತ್ತಾರೆ.

ಬೆಳಿಗ್ಗೆ 6.30 ಈ ಹೊತ್ತಿಗಾಗಲೇ ಅವರ ಕಾಫಿಯನ್ನು ಮುಗಿಸಿರುತ್ತಾರೆ ಹಾಗೂ ಅವರ ದಿನದ ಕೆಲಸವನ್ನು ಆರಂಭಿಸಲು ಅವರ ಕೆಲಸದ ಕೋಣೆಗೆ ಹೋಗುತ್ತಾರೆ. ಪ್ರತಿ ದಿನವೂ ಅವರಿಗೆ ಬರುವ ಇ–ಮೇಲ್‌ಗಳನ್ನು ನೋಡುವುದರ ಮೂಲಕ ಅವರ ಕೆಲಸಗಳಿಗೆ ಚಾಲನೆ ನೀಡುತ್ತಾರೆ ಹಾಗೂ ಆಯಾಸವುಂಟಾಗದಂತೆ ಎಲ್ಲಾ ಇ–ಮೇಲ್‌ಗಳಿಗೂ ಪ್ರತ್ಯುತ್ತರ ನೀಡುತ್ತಾರೆ.

ಬೆಳಿಗ್ಗೆ 7.30– ವಿವಿಧ ಕೇಂದ್ರಗಳಲ್ಲಿ ಕೆಲಸ ಮಾಡುವುದಕ್ಕಾಗಿ ಇಬ್ಬರು ಪ್ರಶಿಕ್ಷಕರನ್ನು ತಯಾರು ಮಾಡುವ ಕೆಲಸವನ್ನು ತೆಗೆದುಕೊಳ್ಳುತ್ತಾರೆ. ಇದನ್ನೂ ಮುಗಿಸುವಷ್ಟರಲ್ಲಿ ಅವರು 8 ಗಂಟೆಯಾಗಿರುವುದನ್ನು ಗಮನಿಸುತ್ತಾರೆ ಹಾಗೂ ಈಗ ಉಪಹಾರದ ಸಮಯ.

ಬೆಳಿಗ್ಗೆ 8.30– ಗುರುಗಳು ತಮ್ಮ ಉಪಹಾರವನ್ನು ಮುಗಿಸುತ್ತಾರೆ ಹಾಗೂ ಅವರ ಕೋಣೆಗೆ ಹೋಗುತ್ತಾರೆ. ಅಲ್ಲಿ ಉಪಸ್ಥಿತರಿರುವ ಎಲ್ಲರನ್ನೂ ಭೇಟಿ ಮಾಡುತ್ತಾರೆ, ಅವರೊಂದಿಗೆ ಮಾತನಾಡುತ್ತಾರೆ ಹಾಗೂ ಅವರ ಕೆಲಸದ ಕೋಣೆಗೆ ಹೋಗುವ ಮುನ್ನ ಹೊಸದಾಗಿ ಮದುವೆಯಾಗಿರುವವರನ್ನು, ಹುಟ್ಟು ಹಬ್ಬಕ್ಕೆಂದು ಬಂದವರನ್ನು, ದೂರದಿಂದ ಬಂದ ಅಭ್ಯಾಸಿಗಳನ್ನು ಹಾಗೂ ಮಕ್ಕಳನ್ನು ಭೇಟಿ ಮಾಡುವುದು ತಪ್ಪಿಹೋಗದಂತೆ ನೋಡಿಕೊಳ್ಳುತ್ತಾರೆ. ಅಲ್ಲಿ ಸೇರಿರುವವರಿಗೆ 9 ಗಂಟೆಗೆ ಸತ್ಸಂಗವಿರುತ್ತದೆಯೆಂದು ಭರವಸೆ ನೀಡುತ್ತಾರೆ.

ಬೆಳಿಗ್ಗೆ 10.00– ಬೈಠಕದ ನಂತರ ತಮ್ಮ ಕೆಲಸದ ಕೋಣೆಗೆ ಹೋಗುತ್ತಾರೆ, ಹಾಗೂ ಕೇಂದ್ರದ ಆಡಳಿತ, ಆಶ್ರಮಗಳು, ಹಣಕಾಸಿನ ವಿಚಾರಗಳು, ಹೊಸಕಟ್ಟಡಗಳು... ಇತ್ಯಾದಿ ಕೆಲಸಗಳನ್ನು ಮಾಡುತ್ತಾರೆ ಹಾಗೂ ನಂತರ ಕೆಲವು ಪ್ರಮುಖ ಅಧಿಕಾರಿಗಳೊಂದಿಗೆ ಒಂದು ಸಭೆಯೂ ಇರುತ್ತದೆ.

ಬೆಳಿಗ್ಗೆ 11.30–ಮಧ್ಯಾಹ್ನದ ಭೋಜನಕ್ಕೆ ಮೊದಲು ಸುಮಾರು 1 ಗಂಟೆ ಕಾಲ ಕಂಪ್ಯೂಟರಿನಲ್ಲಿ ತಮ್ಮ ರಷಿಯನ್ ಭಾಷೆಯ ಪಾಠಗಳನ್ನು ಅಭ್ಯಾಸ ಮಾಡುತ್ತಾರೆ.

ಬೆಳಿಗ್ಗೆ 12.30– ಅದಕ್ಕೆ ಸರಿಹೊಂದುವಂತೆ 3 ರಷಿಯಾದ ಅಭ್ಯಾಸಿಗಳನ್ನು ಅವರೊಂದಿಗೆ ಭೋಜನಕ್ಕಾಗಿ ಆಹ್ವಾನಿಸಲಾಗಿರುತ್ತದೆ. ಅವರು ಆ ಭಾಷೆಯನ್ನು ಅಭ್ಯಾಸ ಮಾಡುತ್ತಾರೆ ಹಾಗೂ ಅವರ ಒಡನಾಟವನ್ನು ಆನಂದಿಸುತ್ತಾರೆ.

ಮಧ್ಯಾಹ್ನ 1.30– ಈ ಗುರುಗಳು ಒಂದು ಸಣ್ಣ ಸಾಕ್ಷ್ಯಚಿತ್ರವನ್ನು ಸಾಮಾನ್ಯವಾಗಿ ಪ್ರಾಣಿಗಳ ಜೀವನವನ್ನು ಕುರಿತಾದ ಚಿತ್ರವನ್ನು ನೋಡಲು ಹೋಗುತ್ತಾರೆ.

ಮಧ್ಯಾಹ್ನ 2.30 ಅವರ ಮಧ್ಯಾಹ್ನ ತುಸು ನಿದ್ರೆಗಾಗಿ ತಮ್ಮ ಮಲಗುವ ಕೋಣೆಗೆ ಹೋಗುತ್ತಾರೆ. ಮಲಗುವ ಮುನ್ನ ಅರ್ಧ ಗಂಟೆ ಪುಸ್ತಕವನ್ನು ಓದುವರು.

ಸಂಜೆ 5.30– ಗುರುಗಳು ಉದ್ಯಾನದಲ್ಲಿ ಎಲ್ಲರೊಂದಿಗೆ ಕುಳಿತುಕೊಳ್ಳುತ್ತಾರೆ ಹಾಗೂ ಷಹಜಹಾನ್‌ಪುರದಲ್ಲಿ ಬಾಬೂಜಿಯವರೊಂದಿಗೆ ಅವರ ದಿನಗಳನ್ನು ಕುರಿತು ಮಾತನಾಡುತ್ತಾರೆ. ನಂತರ ಅವರು 45 ನಿಮಿಷಗಳ ಬೈಠಕವನ್ನು ಕೊಡುತ್ತಾರೆ. ನಂತರ ಸಂಜೆಯ ಕೆಲಸಕ್ಕಾಗಿ ತಮ್ಮ ಕೆಲಸದ ಕೋಣೆಗೆ ಹಿಂದಿರುಗುತ್ತಾರೆ!

ರಾತ್ರಿ 7.00– ಎಲ್ಲ ಹೊಸ ಇ–ಮೇಲ್‌ಗಳಿಗೆ ಉತ್ತರಿಸಿ ಹಾಗೂ ತಮ್ಮ ದಿನಚರಿಯನ್ನು ಸಂಪೂರ್ಣಗೊಳಿಸಿ, ಗುರುಗಳು ರಾತ್ರಿಯ ಭೋಜನಕ್ಕಾಗಿ ತೆರಳುತ್ತಾರೆ.

ರಾತ್ರಿ 8.30– ನಿತ್ಯದ ಚಲನಚಿತ್ರ ವೀಕ್ಷಣೆಯ ಸಮಯ. ಅಭ್ಯಾಸಿಯೊಬ್ಬರು ತಂದಿರುವ ಹಲವು ಚಿತ್ರಗಳಲ್ಲಿ ಒಂದು ಆರಿಸಿ ಎಲ್ಲರೊಂದಿಗೆ ಅದನ್ನು ವೀಕ್ಷಿಸುತ್ತಾರೆ.

ರಾತ್ರಿ 10.30– ಪ್ರಯಾಸಕರ ದಿನದ ಕೊನೆಯಲ್ಲಿ ಅತಿ ಅವಶ್ಯಕವಾಗಿ ಬೇಕಾಗಿರುವ ನಿದ್ರೆಗಾಗಿ ಹಾಸಿಗೆಗೆ ಹೋಗುತ್ತಾರೆ.







## ತಿರುಪ್ಪೂರಿನಲ್ಲಿ ಗುರುಗಳು

ಏಪ್ರಿಲ್ 16ರಂದು ಗುರುಗಳು ತಿರುಪ್ಪೂರಿನ ಡೈಮಂಡ್ ಜ್ಯೂಬಿಲಿ ಪಾರ್ಕಿನ ಆಶ್ರಮಕ್ಕೆ ಹೋದರು. 18ರಂದು ಭಾನುವಾರ ಬೆಳಿಗ್ಗೆ 7.30ಕ್ಕೆ ಸತ್ಸಂಗವನ್ನು ನಡೆಸಿಕೊಟ್ಟರು. ಸುಮಾರು 3000 ಅಭ್ಯಾಸಿಗಳು ಉಪಸ್ಥಿತರಿದ್ದರು. ಸಂಜೆ ಚೆಟ್ಟಿಪಾಳ್ಯಂನಲ್ಲಿರುವ ಯೋಗಾಶ್ರಮಕ್ಕೆ ಭೇಟಿ ನೀಡಿದರು. ಆಶ್ರಮ ಹಾಗೂ ಗುರುಗಳ ಕುಟೀರದ ನಿರ್ವಹಣೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಸ್ವಲ್ಪ ಸಮಯ ತಂಗಿದ ನಂತರ ಡಿಜೆ ಪಾರ್ಕಿಗೆ ಮರಳಿದರು.

ಏಪ್ರಿಲ್ 19ರ ಸಂಜೆ ಗುರುಗಳು ತಿರುಪ್ಪೂರಿನಿಂದ 30ಕಿಮೀ ದೂರದಲ್ಲಿರುವ ಕಾಂಗಯಮ್ ಆಶ್ರಮಕ್ಕೆ ಹೋದರು. ಅಲ್ಲಿಯ ವಾತಾವರಣವು ಬಹಳ ಸುಂದರವಾಗಿದ್ದಿತು ಹಾಗೂ ಧ್ಯಾನ ಮಂದಿರದ ಹೊರಗಿರುವ ಬೇವಿನ ಮರದ ನೆರಳಿನಲ್ಲಿ ಗುರುಗಳು ಅಭ್ಯಾಸಿಗಳಿಗೆ ಬೈಠಕವನ್ನು ನೀಡಿದರು. ಹತ್ತಿರದ ಕೇಂದ್ರಗಳ ಸುಮಾರು 300 ಅಭ್ಯಾಸಿಗಳು ಈ ಸತ್ಸಂಗದಲ್ಲಿ ಭಾಗವಹಿಸಿದರು.

ಏಪ್ರಿಲ್ 23, ಭಾನುವಾರದಂದು ಆಶ್ರಮದಲ್ಲಿ ನೆರೆದಿದ್ದ ಸುಮಾರು 3000 ಅಭ್ಯಾಸಿಗಳಿಗೆ ಸತ್ಸಂಗವನ್ನು ನಡೆಸಿಕೊಟ್ಟರು. ಪ್ರತಿ ಸಂಜೆ ಅವರು ತಂಪಾದ ಗಾಳಿಯನ್ನು, ಪ್ರಕೃತಿ ಸೌಂದರ್ಯವನ್ನು ಸವಿಯುತ್ತಾ ಉದ್ಯಾನದಲ್ಲಿ ಕುಳಿತುಕೊಳ್ಳುತ್ತಿದ್ದರು.

ಗುರುಗಳು ಅಲ್ಲಿ ತಂಗಿರುವ ಸಮಯದಲ್ಲಿ ಬಾಬೂಜಿಯವರ ಹುಟ್ಟುಹಬ್ಬದ ಆಚರಣೆಗಾಗಿ ಸಿದ್ಧತೆಗಳು ಭರದಿಂದ ಸಾಗುತ್ತಿದ್ದವು. ಇತರ ಕೇಂದ್ರಗಳಿಂದ ಅನೇಕ ಸ್ವಯಂಸೇವಕರು ಆಚರಣೆಗಾಗಿ ಸ್ಥಳವನ್ನು ಸಿದ್ಧಪಡಿಸುವುದರಲ್ಲಿ ಕಾರ್ಯನಿರತರಾಗಿದ್ದರು. ಸುಮಾರು 15000 ಅಭ್ಯಾಸಿಗಳು ಕುಳಿತುಕೊಳ್ಳುವಷ್ಟು ಸ್ಥಳಾವಕಾಶವಿರುವ ಧ್ಯಾನಮಂದಿರವನ್ನು ನಿರ್ಮಿಸಲಾಯಿತು.

ಏಪ್ರಿಲ್ 29ರಿಂದ ಮೇ 1ರವರೆಗೆ ಬಾಬೂಜಿಯವರ ಜನ್ಮ ದಿನಾಚರಣೆಯು ಆ ಪ್ರಶಾಂತವಾದ ವಾತಾವರಣದಲ್ಲಿ ಬಹಳ ಚೆನ್ನಾಗಿ ನೆರವೇರಿತು. ಡಿಜೆ ಪಾರ್ಕ್ ಬಹಳ ಅದ್ದೂರಿಯಾಗಿ ಕಂಗೊಳಿಸುತ್ತಿತ್ತು. ಗುರುಗಳ ವೇದಿಕೆಯಿದ್ದ ಧ್ಯಾನಮಂದಿರವನ್ನು ಪುಷ್ಪಗಳಿಂದ ಬಹಳ ಸುಂದರವಾಗಿ ಅಲಂಕರಿಸಲಾಗಿತ್ತು. ಅಲ್ಲಿ ನೆರೆದಿದ್ದ ಸುಮಾರು 4000 ಅಭ್ಯಾಸಿಗಳಿಗೆ ಗುರುಗಳು ಸತ್ಸಂಗವನ್ನು ನಡೆಸಿಕೊಟ್ಟರು. ಸತ್ಸಂಗದ ನಂತರ ಅವರು ಕೆಲವು ಪುಸ್ತಕಗಳನ್ನು, ಸಿ.ಡಿ ಹಾಗೂ ಡಿವಿಡಿಗಳನ್ನು ಬಿಡುಗಡೆ ಮಾಡಿದರು.

30ರ ಸಂಜೆ 5.15ಕ್ಕೆ ಗುರುಗಳು ಸತ್ಸಂಗವನ್ನು ನಡೆಸಿಕೊಟ್ಟರು. ನಂತರ ಅವರು ಪುಣೆ ಕೇಂದ್ರದ (ಮಹಾರಾಷ್ಟ್ರ) ಅಭ್ಯಾಸಿಗಳನ್ನು ಭೇಟಿ ಮಾಡಿದರು ಹಾಗೂ ಗುರುಗಳ ಗಮನವು ಅಭ್ಯಾಸಿಗಳ ಮೇಲಿರುವಂತೆ ಅಭ್ಯಾಸಿಗಳ ನಿರೀಕ್ಷೆಗಳು ಹೇಗಿರುತ್ತವೆ ಎಂಬುದನ್ನು ಚರ್ಚಿಸಲಾಯಿತು. ಗುರುಗಳೊಂದಿಗೆ ಇರುವಾಗ ಅಭ್ಯಾಸಿಗಳಲ್ಲಿ ಸ್ವಲ್ಪವೂ ಅಹಂಭಾವ ಇರಬಾರದು ಹಾಗೂ ಅವರಿಂದ ಏನನ್ನೂ ನಿರೀಕ್ಷಿಸಬಾರದೆಂದು ವಿವರಿಸಿದರು.

ಮೇ 5ರ ಬೆಳಿಗ್ಗೆ ಗುರುಗಳು ಕೊಯಂಬತ್ತೂರಿಗೆ ತೆರಳಿದರು ಹಾಗೂ 9 ಗಂಟೆಗೆ ಸತ್ಸಂಗವನ್ನು ನಡೆಸಿಕೊಟ್ಟರು. ಸುಮಾರು 1000ಕ್ಕಿಂತಲೂ ಹೆಚ್ಚು ಅಭ್ಯಾಸಿಗಳು ಇದರಲ್ಲಿ ಪಾಲ್ಗೊಂಡಿದ್ದರು.

ಸಂಜೆಯ ವೇಳೆ ಗುರುಗಳು ಕೊಯಂಬತ್ತೂರಿನಿಂದ ಹೊರಟು ಮಲಂಪುರಕ್ಕೆ ಪ್ರವಾಸ ಕೈಗೊಂಡರು. ಮಲಂಪುರದಲ್ಲಿ ವಾತಾವರಣವು ಬಹಳ ತೇವ ಹಾಗೂ ಬಿಸಿಯಾಗಿತ್ತು. ಗುರುಗಳು ಪುನಃಶ್ಚೇತನ ಕೇಂದ್ರದಲ್ಲಿ ಒಂದು ರಾತ್ರಿ ಉಳಿದು ಮರುದಿನ ಉಪಾಹಾರದ ನಂತರ ಹೊರಡುವ ಯೋಜನೆ ಹೊಂದಿದ್ದರು. ಆದರೆ ಮರುದಿನ ಬೆಳಿಗ್ಗೆ ಕೆಲವು ಆನೆಗಳ ಹಾವಳಿಯಿಂದ ರಸ್ತೆಗಳು ಸಂಪೂರ್ಣವಾಗಿ ಮುಚ್ಚಿಹೋಗಿ, ಜನಸಂಚಾರವನ್ನು ಸ್ಥಗಿತಗೊಳಿಸಲಾಗಿತ್ತು. ಆದುದರಿಂದ ಗುರುಗಳು ತಮ್ಮ ವಾಸ್ತವ್ಯವನ್ನು ಮುಂದೂಡಬೇಕಾಯಿತು, “ನನ್ನ ಮೇಲಧಿಕಾರಿಗಳು(ಬಾಬೂಜಿಯವರು) ನಾನು ಇಲ್ಲಿಯೇ ಇರಬೇಕೆಂದು ಬಯಸುತ್ತಿದ್ದಾರೆ” ಎಂದು ಹೇಳಿದರು.

ಮೇ 7ರಂದು ಗುರುಗಳು ತಿರುಪ್ಪೂರಿಗೆ ಮರಳಿದರು ಹಾಗೂ ಡಿಜೆ ಪಾರ್ಕಿನಲ್ಲಿ ನೆರೆದಿದ್ದ ಸುಮಾರು 1500 ಅಭ್ಯಾಸಿಗಳಿಗೆ 9ರ ಭಾನುವಾರ ಬೆಳಗಿನ ಸತ್ಸಂಗವನ್ನು ನಡೆಸಿಕೊಟ್ಟರು.

ಮೇ 10ರಂದು ಅವರನ್ನು ಭೇಟಿಮಾಡಲು ಅನೇಕ ಕೇಂದ್ರಗಳಿಂದ ಅಭ್ಯಾಸಿಗಳನ್ನು ಗುರುಗಳು ತಿರುಪ್ಪೂರಿಗೆ ಆಹ್ವಾನಿಸಿದರು. ಆದುದರಿಂದ ರಾಜಪಾಲಯಂ, ಶ್ರೀವಿಲ್ಲಿಪುತ್ತೂರು, ಹೈದರಾಬಾದ್ ಹಾಗೂ ಮಧುರೈ ವಲಯದ ಎಲ್ಲಾ ಕೇಂದ್ರಗಳ ಅಭ್ಯಾಸಿಗಳನ್ನು ಆಹ್ವಾನಿಸಲಾಯಿತು ಹಾಗೂ 11ರ ನಂತರ ಡಿಜೆ ಪಾರ್ಕಿನಲ್ಲಿ ಅನೇಕ ಅಭ್ಯಾಸಿಗಳು ಮೇಳೈಸಿದರು.

ಮೇ11ರಿಂದ 16ರವರೆಗೆ ಬೆಳಿಗ್ಗೆ 6.30 ಸತ್ಸಂಗಗಳನ್ನು ಗುರುಗಳೇ ನಡೆಸಿಕೊಟ್ಟರು. ವಿವಿಧ ಕೇಂದ್ರಗಳಿಂದ 1500ಕ್ಕಿಂತಲೂ ಅಧಿಕ ಅಭ್ಯಾಸಿಗಳು ಆ ದಿನಗಳಲ್ಲಿ ಉಪಸ್ಥಿತರಿದ್ದರು. 16ರಂದು ಸಂಜೆಯ ಸತ್ಸಂಗದ ನಂತರ ನೆರೆದಿದ್ದ ಎಲ್ಲ ಅಭ್ಯಾಸಿಗಳಿಗೆ ಅವರೊಂದಿಗೆ ಅಲ್ಲಿ ಇದ್ದುದಕ್ಕಾಗಿ ಧನ್ಯವಾದಗಳನ್ನು ಹೇಳಿದರು ಹಾಗೂ ಪ್ರಾಣಾಹುತಿಯ ಮೂಲಕ ನೀಡಿರುವ ಸಂಪತ್ತನ್ನು ನಿಯಮಿತವಾಗಿ ಸಾಧನೆಯನ್ನು ಮಾಡುವುದರ ಮೂಲಕ ಹಾಗೂ ಹತ್ತು ನಿಯಮಗಳನ್ನು ಪರಿಪಾಲಿಸುವುದರ ಮೂಲಕ ಕಾಪಾಡಿಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತ ತಮ್ಮ ಭಾಷಣದೊಂದಿಗೆ ಈ ಸಮಾರಂಭವನ್ನು ಮುಕ್ತಾಯ ಮಾಡಿದರು. ಭಾಷಣದ ಕೊನೆಯಲ್ಲಿ ಇದೇ ರೀತಿಯ ಕಾರ್ಯಕ್ರಮಗಳ(ಗುರುಗಳೊಂದಿಗೆ ನಿರಂತರವಾದ ಸತ್ಸಂಗಗಳು) ಭವಿಷ್ಯದಲ್ಲಿ ಮುಂದುವರೆಯುತ್ತವೆ ಎಂದು ಖಾತ್ರಿಪಡಿಸಿದರು ಹಾಗೂ ಎಲ್ಲ ಅಭ್ಯಾಸಿಗಳು ಹೆಚ್ಚು ಹೆಚ್ಚು ಸ್ವೀಕರಿಸಲು ತಯಾರಾಗಿರುವ ಹೃದಯಗಳೊಂದಿಗೆ ಪುನಃ ಬರಲಿ ಎಂದು ಆಶೀರ್ವದಿಸಿದರು.

ತಿರುಪ್ಪೂರಿನಲ್ಲಿ ಒಂದು ತಿಂಗಳಿನ ಸುದೀರ್ಘವಾದ ವಾಸ್ತವ್ಯದ ನಂತರ 19ರ ಮಧ್ಯಾಹ್ನ ಗುರುಗಳು ಕೊಯಂಬತ್ತೂರಿಗೆ ತೆರಳಿ, ಅಲ್ಲಿ ಅಭ್ಯಾಸಿಯೊಬ್ಬರ ಮನೆಯಲ್ಲಿ ತಂಗಿದ್ದರು ಹಾಗೂ ಮರುದಿನ ಬೆಳಿಗ್ಗೆ ಸತ್ಸಂಗವನ್ನು ನಡೆಸಿಕೊಟ್ಟರು.

ಮಲಂಪುರ






ಕೊಯಮತ್ತೂರು


LMOIS ವಿದ್ಯಾರ್ಥಿಗಳೊಡನೆ


ಚೆನ್ನೈ

## ಚೆನ್ನೈಗೆ ವಾಪಸ್

ಗುರುಗಳು ಮೇ 21ರಂದು ಬೆಳಿಗ್ಗೆ 11.30ಕ್ಕೆ ಚೆನ್ನೈಗೆ ಹಿಂತಿರುಗಿದರು. ಮುಂದಿನ ಮೂರು ವಾರಗಳಲ್ಲಿ ಗುರುಗಳು 'ಗಾಯತ್ರಿ' ಮತ್ತು ಮಣಪಾಕ್ಕಂನ ಆಶ್ರಮದ ನಡುವೆ ಓಡಾಟ ನಡೆಸಿದರು. ಚೆನ್ನೈನ ಅಭ್ಯಾಸಿಗಳು ಬಹುದಿನಗಳ ನಂತರ ಭಾನುವಾರದ ಸತ್ಸಂಗವನ್ನು 23ರಂದು ಗುರುಗಳು ನಡೆಸಿಕೊಟ್ಟದ್ದರಿಂದ ಉಲ್ಲಸಿತರಾದರು. ಅವರು ಮನೆಯಲ್ಲಿರುವ ಸಮಯದಲ್ಲಿ, ಹಾಜರಿದ್ದ ಹಲವರೊಡನೆ ಕೆಲ ಬಾರಿ ಮರೀನಾ ಸಮುದ್ರತೀರಕ್ಕೆ ಭೇಟಿ ನೀಡಿ ಶಾಂತಿಯುತ ಸಂಜೆಯನ್ನು ಆಹ್ಲಾದಿಸಿದರು.

ಲಾಲಾಜಿ ಮೆಮೋರಿಯಲ್ ಒಮೇಗಾ ಅಂತರ್ರಾಷ್ಟ್ರೀಯ ಶಾಲೆಯ ಹತ್ತನೇ ತರಗತಿಯ ಎಲ್ಲಾ ಮಕ್ಕಳು 100 ಪ್ರತಿಶತ ಉತ್ತೀರ್ಣರಾಗಿ ಒಳ್ಳೆಯ ಫಲಿತಾಂಶ ತಂದಿದ್ದಾರೆ. ಗುರುಗಳು ಮೇ 28ರಂದು ವಿದ್ಯಾರ್ಥಿಗಳ ಅತ್ಯುತ್ತಮ ಸಾಧನೆಯನ್ನು ಅಭಿನಂದಿಸಲು ಶಾಲೆಗೆ ಭೇಟಿ ನೀಡಿದರು. ಸರಳ, ಸುಸೂತ್ರ ಸಂಭಾಷಣೆಯೊಂದಿಗೆ ವಾತಾವರಣದಲ್ಲಿ ಉಲ್ಲಾಸ ತುಂಬಿತಲ್ಲದೆ ಆ ಸಂಜೆಯನ್ನು ನೆನಪಿನಲ್ಲುಳಿಯುವಂತೆ ಮಾಡಿತು. ಗುರುಗಳು ನೆರೆದಿದ್ದ ವಿದ್ಯಾರ್ಥಿಗಳಿಗೆ ಜೀವನದ ಸಂಪೂರ್ಣ ಪ್ರಯೋಜನ ಪಡೆದುಕೊಳ್ಳುವ ಉಪಯುಕ್ತತೆಯನ್ನು ವಿವರಿಸುತ್ತಾ ಹೇಳಿದರು, “ನಾನು ಎಂದೂ ಮಕ್ಕಳಿಗೆ ತರಗತಿಗೆ ಮೊದಲಿಗರಾಗಬೇಡಿ ಎಂದು ಹೇಳುತ್ತೇನೆ. ನೀವೇ ಮೊದಲಿಗರಾದರೆ ಜನ ಪ್ರತೀಸಲ ನಿಮ್ಮಿಂದ ಇನ್ನೂ ಹೆಚ್ಚಿನದನ್ನು ಬಯಸುತ್ತಾರೆ. ನಮ್ಮ ಕಾಲದಲ್ಲಿ ಶ್ರೇಯಾಂಕ (ರ್‍ಯಾಂಕ್)ಗಳೇ ಇರಲಿಲ್ಲ. ವಿಷಯಗಳ ಬಗೆಗಿನ ಪೂರ್ಣ ಜ್ಞಾನವೇ ಮುಖ್ಯವಾಗಿತ್ತು.” ಅವರು ಜೀವನದ ಸಂಪೂರ್ಣ ಆನಂದ ಅನುಭವಿಸುವುದರ ಬಗ್ಗೆ ಹೇಳುತ್ತಾ ಕೇವಲ ಶಿಕ್ಷಣ ಮತ್ತು ವೃತ್ತಿಗಳಿಗಷ್ಟೇ ಅಲ್ಲದೆ ಧರ್ಮಕಾರ್ಯಗಳು, ಆರೋಗ್ಯಕರ ಸಂಬಂಧಗಳು, ಉತ್ತಮ ನಡತೆ ಹಾಗೂ ಒಟ್ಟಾರೆ ಸಂತೋಷದ ಜೀವನಕ್ಕೆ ಪ್ರಾಮುಖ್ಯ ನೀಡಬೇಕೆಂದು ಹೇಳಿದರು.

ಜೂನ್ 6ರಂದು ಗುರುಗಳು ಎಂಟು ವಿವಾಹಗಳನ್ನು ನೆರವೇರಿಸಿದರು ಮತ್ತು ಅಭ್ಯಾಸಿಗಳೊಡನೆ ಮಾತುಕತೆ ನಡೆಸಿದರು. 7ರಂದು ಗುರುಗಳೊಡನೆ ಕೆಲವು ದಿನಗಳನ್ನು ಕಳೆಯಲು ಆಂಧ್ರಪ್ರದೇಶದಿಂದ 150ಕ್ಕೂ ಹೆಚ್ಚು ಅಭ್ಯಾಸಿಗಳು ಬಂದಿದ್ದರು. ನಿತ್ಯಕ್ರಮವನ್ನು ಬದಲಾಯಿಸಿ ಅವರು ಅಂದು ಆಶ್ರಮದ ಉಪಹಾರಗೃಹ–ರುಚಿ ಕೆಫೆಯಲ್ಲಿ ಸುತ್ತುವರಿದ ಅಭ್ಯಾಸಿಗಳೊಡನೆ ಭೋಜನ ಮಾಡಿದರು. ಎಲ್ಲರೂ ಅವರೊಡನೆ ಇರುವುದಲ್ಲದೆ ಅವರಿಗೆ ಅಗತ್ಯವಾದ ಸ್ಥಳಾವಕಾಶ ಮಾಡಿಕೊಡುವುದರೊಡನೆ ಸಂಜೆಯನ್ನು ಶಿಸ್ತಿನಿಂದ ಕಳೆದರು. ಅವರು ಮನೆಯಿಂದ ಆಶ್ರಮಕ್ಕೆ ವಾಪಸಾದಾಗ ಅವರಿಗೆ ಶುಭಾಶಯ ನೀಡಲು ಆಶ್ರಮದ ತುಂಬಾ ನೆರೆದಿದ್ದ ದಕ್ಷಿಣ ಆಂಧ್ರದಿಂದ ಬಂದ ಸುಮಾರು 1200 ಅಭ್ಯಾಸಿಗಳಲ್ಲಿ ಅದೇ ಶಿಸ್ತು ಅವರಿಗೆ ಕಂಡುಬಂದಿತು. ಸಂಜೆ ಆಶ್ರಮದಲ್ಲಿ ತಿರುಗಾಡುವಾಗ ಅವರು ಹೊಸದಾಗಿ ನಿರ್ಮಾಣವಾಗುತ್ತಿರುವ ಸಭಾಂಗಣದ ಪ್ರಗತಿಯನ್ನು ಗಮನಿಸಿದರು. ಮಣಪಾಕ್ಕಂಗೆ ಬಹುದೂರದಿಂದ ಬಂದ ಅಭ್ಯಾಸಿಗಳ ಒಳಿತಿಗಾಗಿ ಅವರು ಮುಂದಿನ ಮೂರುದಿನಗಳ ಕಾಲ ಧ್ಯಾನಮಂದಿರದಲ್ಲಿ ಪದೇಪದೇ ಸತ್ಸಂಗಗಳನ್ನು ನಡೆಸಿಕೊಟ್ಟರು.

12ರಂದು ಗುರುಗಳು ತಮ್ಮ ನಿವಾಸದಲ್ಲಿ ಆಂಧ್ರಪ್ರದೇಶದ ಸುಮಾರು 60 ಅಭ್ಯಾಸಿಗಳನ್ನು ಎದುರುಗೊಂಡು ಅವರೆಲ್ಲರ ಪ್ರಶ್ನೆಗಳಿಗೆ ಸಾವಧಾನದಿಂದ ಉತ್ತರಿಸಿ ಭೋಜನದ ನಂತರ ಅವರನ್ನು ಬೀಳ್ಕೊಟ್ಟರು. 13ರಂದು ಬೆಳಗಿನ 7.30ರ ಸತ್ಸಂಗದಲ್ಲಿ 5000ಕ್ಕೂ ಹೆಚ್ಚು ಅಭ್ಯಾಸಿಗಳು ಉಪಸ್ಥಿತರಿದ್ದರು, ಅದಾದ ನಂತರ ಗುರುಗಳು ಎರಡು ವಿವಾಹಗಳನ್ನು ನೆರವೇರಿಸಿದರು. ಅಭ್ಯಾಸಿಗಳೊಡನೆ ಅನೌಪಚಾರಿಕ ಸಂವಾದವೊಂದರಲ್ಲಿ ಗುರುಗಳು ದೈವಿಕಪ್ರಜ್ಞೆಯ ಕುರಿತು ಮಾತನಾಡುತ್ತಾ ಹೇಳಿದರು, “ಪ್ರತಿಯೊಬ್ಬ ಅಭ್ಯಾಸಿಯೂ ಧ್ಯಾನದಲ್ಲಿ ವಿಭಿನ್ನ ಅನುಭವ ಪಡೆಯುತ್ತಾನೆ ಮತ್ತು ಅವರೆಲ್ಲರೂ ಸರಿ. ಅದು ಏಕೆಂದರೆ ದೈವಿಕತೆಯು ನಮ್ಮೊಂದಿಗೆ ತನ್ನನ್ನು ಹೊಂದಿಸಿಕೊಳ್ಳುತ್ತಾ ನಮ್ಮೆಲ್ಲರೊಡನೆ ಅನನ್ಯ ಸಂಬಂಧ ಬೆಳೆಸಿಕೊಳ್ಳುತ್ತದೆ. ಶೃತಿಕವೆ (ಟ್ಯೂನಿಂಗ್ ಫೋರ್ಕ್) ವೀಣೆಯ ತಂತಿಯೊಡನೆ ಪರಿಪೂರ್ಣ ಸಾಮರಸ್ಯದೊಂದಿಗೆ ಅನುರಣಿಸುವಂತೆ, ಎಲ್ಲಾ ಜೀವಿಗಳೂ ದೈವದೊಡನೆ ಎಂದು ಅನುರಣಿಸುತ್ತವೆಯೋ ಅಂದು ನಿಜವಾದ ದೈವಿಕತೆ ಒಲಿಯುತ್ತದೆ.” ಪ್ರತಿಯೊಬ್ಬರೂ ಸಂವಾದದಲ್ಲಿ ಮಗ್ನರಾಗಿದ್ದರು. ನಂತರ ನೆರೆದವರಿಗಾಗಿ ಬೈಠಕನ್ನು ನೀಡಲಾಯಿತು.

## ಹೊಸ ಹೊಣೆಗಾರಿಕೆಗಳು

| | |
|---|---|
| ಸೋ. ಕೆ.ಟಿ.ಮಂಜುನಾಥ್ | ನಿರ್ದೇಶಕರು, ರಿಟ್ರೀಟ್ ಕೇಂದ್ರ–ಪಾನ್‌ಶೆತ್, ಪುಣೆ |
| ಸೋ. ಡಾ. ಎ. ಪೆರುಮಾಳ್ | ನಿರ್ದೇಶಕರು, ಕ್ರೆಸ್ಟ್, ಬೆಂಗಳೂರು |

### ವಲಯ ಮುಖ್ಯಸ್ಥರು

| | |
|---|---|
| ಸೋ. ಶೇಷಾದ್ರಿ ವೆಂಕಟಾದ್ರಿ | ದಕ್ಷಿಣ ಕರ್ನಾಟಕ |
| ಸೋ. ಟಿ.ವಿ.ವಿಶ್ವನಾಥ್ ರಾವ್ | ದಕ್ಷಿಣ ತಮಿಳುನಾಡು |
| ಸೋ. ಮನೋಜ್ ತಿವಾರಿ | ಬಿಹಾರ್ ಮತ್ತು ಜಾರ್ಖಂಡ್ |
| ಸೋ. ಎಸ್.ಪ್ರಕಾಶ್ | ಉತ್ತರ ತಮಿಳುನಾಡು |

### ಕೇಂದ್ರ ಮುಖ್ಯಸ್ಥರು

| | |
|---|---|
| ಸೋ. ಪ್ರಭಾಕರ್ ರಾವೂರಿ | ಬೆಂಗಳೂರು |
| ಸೋ. ಶೇಖರ್ ರಾಯ್ | ಭುವನೇಶ್ವರ |

### ಪ್ರಾದೇಶಿಕ ಮುಖ್ಯಸ್ಥರು

| | |
|---|---|
| ಸೋ. ಪ್ರಸನ್ನ ಕೃಷ್ಣ | ಓಷಿಯಾನ |
| ಸೋ. ಎನ್.ಎಸ್.ನಾಗರಾಜ | ಯೂರೋಪ್ |
| ಸೋ. ಶರತ್ ಹೆಗಡೆ | ಆಫ್ರಿಕಾ ಖಂಡ ಮತ್ತು ಹಿಂದೂ ಮಹಾಸಾಗರ ದ್ವೀಪಗಳು |
| ಸೋ. ನಿತಿನ್ ಗೋವಿಲ್ಲ | ಪೌರ್ವಾತ್ಯ ಮತ್ತು ಆಗ್ನೇಯ ಏಷ್ಯಾ |
| ಸೋ. ವಿನೋದ್ ಮಿಶ್ರಾ | ಚೀನಾ |
| ಸೋ. ವಿಲಿಯಮ್ ವೇಕಾಟ್ | ಲ್ಯಾಟಿನ್ ಅಮೇರಿಕಾ ಮತ್ತು ಕೆರೆಬಿಯನ್ |
| ಸೋ. ಸಂತೋಷ್ ಶ್ರೀನಿವಾಸನ್ | ಕೆನಡಾ ಮತ್ತು ಯುಎಸ್‌ಎ |
| ಸೋ. ಶ್ರೀಧರ್ ಕದಂಬಿ | ಮಾಜಿ ಸಿಐಎಸ್ ರಾಷ್ಟ್ರಗಳು |
| ಸೋ. ಆಶಿಶ್ ಸಿಂಗ್ | ದಕ್ಷಿಣ ಏಷ್ಯಾ (ಶ್ರೀಲಂಕಾ, ಭೂತಾನ್, ಪಾಕಿಸ್ತಾನ್, ನೇಪಾಳ ಮತ್ತು ಬಾಂಗ್ಲಾದೇಶ) |

## ಗತಕಾಲಕ್ಕೊಂದು ಇಣುಕುನೋಟ

ಗುರುಗಳು ತಮ್ಮ ಗುರುಗಳಾದ ಬಾಬೂಜಿ ಮಹಾರಾಜರೊಡನೆ 1972ನಲ್ಲಿ ಮೊದಲ ಬಾರಿಗೆ ವಿದೇಶಪ್ರಯಾಣ ಮಾಡಿದಾಗ ಗುರುತು ಹಾಕಿಕೊಂಡ ಕೂಲಂಕುಷ ವಿವರಗಳನ್ನು ಆಧರಿಸಿ ಪ್ರಕಟಗೊಂಡ ಪುಸ್ತಕವೇ 'ಇಂಡಿಯಾ ಇನ್ ದ ವೆಸ್ಟ್'. ಆ ಪಯಣದ ತುಣುಕುಗಳು ಇಲ್ಲಿವೆ.


ಈಜಿಪ್ಟ್– ಏಪ್ರಿಲ್ 16, 1972ರಂದು ಬಾಬೂಜಿಮಹಾರಾಜರು ಶಹಜಹಾನ್‌ಪುರದಿಂದ ದೆಹಲಿಗೆ ಹೊರಟರು. ಏಪ್ರಿಲ್ 20ರಂದು ಅವರು ನಮ್ಮ ಗುರುಗಳೊಡನೆ ಬಾಂಬೆಗೆ ಹೊರಟರು ಮತ್ತು ಮರುದಿನ ಅಲ್ಲಿಂದ ಕೈರೋಗೆ ಹೊರಟರು.

ಇಟಲಿ – ಅವರು 9 ದಿನಗಳ ಕಾಲ ರೋಮ್‌ನಲ್ಲಿ ಇದ್ದರು ಮತ್ತು ಅನೇಕ ಅಭ್ಯಾಸಿಗಳನ್ನು ಭೇಟಿ ಮಾಡಿದರು, ಅವರ ಮನೆಗಳಿಗೆ ಭೇಟಿ ನೀಡಿದರು, ಆಸಕ್ತರಿಗೆ ಪರಿಚಯಾತ್ಮಕ ಬೈಠಕುಗಳನ್ನು ನೀಡಿದರು, ಅವರ ಪ್ರಶ್ನೆಗಳಿಗೆ ಉತ್ತರಿಸಿದರು ಮತ್ತು ಹೊಸ ಪ್ರಶಿಕ್ಷಕರನ್ನು ತಯಾರುಮಾಡಿದರು. ಒಂದು ಸ್ಥಳೀಯ ಸಭೆಯಲ್ಲಿ ನಮ್ಮ ಗುರುಗಳು 'ಸಹಜ ಮಾರ್ಗದ ಬೆಳಕಿನಲ್ಲಿ ಧರ್ಮ ಮತ್ತು ಆಧ್ಯಾತ್ಮ' ಎಂಬ ವಿಷಯದ ಮೇಲೆ ಮಾತನಾಡಿದರು.

ಫ್ರಾನ್ಸ್ 29 ಏಪ್ರಿಲ್– ಅವರು ನೈಸ್, ಮಾರ್ಸಿಲಿಸ್, ಲೆ ಬ್ಯುಸೆ ಮತ್ತು ಪ್ಯಾರಿಸಿನಂತಹ ಅನೇಕ ಸ್ಥಳಗಳಿಗೆ ಪಯಣಿಸಿದರು. ಒಂದು ಸಂಜೆ ಬಾಬೂಜಿಯವರು ಅನೇಕ ವರ್ಷಗಳ ಹಿಂದೆ ಟಿಬೇಟಿನಲ್ಲಿ ಜೀವಂತ ಲಾಮಾನೊಡನೆ ಕೆಲವು ವರ್ಷಗಳನ್ನು ಕಳೆದು ಮೂರನೇ ಕಣ್ಣನ್ನು ತೆರೆಯಲು ಶಸ್ತ್ರಚಿಕಿತ್ಸೆಗೆ ಒಳಗಾದ ಫ್ರೆಂಚ್ ಮಹನೀಯರೊಬ್ಬರೊಡನೆ ಸಂವಾದದಲ್ಲಿ ಮಗ್ನರಾಗಿದ್ದರು. ಬಾಬೂಜಿಯವರು ಅವರಿಗೆ ತಮ್ಮನ್ನು ಪರಿಶೀಲಿಸಿ ಅಭಿಪ್ರಾಯ ತಿಳಿಸಲು ಹೇಳಿದರು. ಆ ಮಹನೀಯರು ಬಾಬೂಜಿಯವರ ಗುರುಗಳು ಸದಾ ಅವರೊಂದಿಗಿರುವರೆಂದು ಹೇಳಿದರು. ಬಾಬೂಜಿಯವರು ಅದನ್ನು ಒಪ್ಪಿಕೊಂಡರು. ನಂತರ ಆ ವ್ಯಕ್ತಿಯು ಬಾಬೂಜಿಯವರಿಗೆ ಪ್ರಾಣಾಹುತಿ ನೀಡಿದರು, ಅದು ಅವರಿಂದ ಸಾಧ್ಯವೆಂದು ಬಾಬೂಜಿಯವರು ದೃಢಪಡಿಸಿದರು. ಅವರ ಪ್ರಾಮಾಣಿಕತೆಯಿಂದ ಮತ್ತು ಅವರು ತಮ್ಮ ಗುರುಗಳ ಮೇಲಿಟ್ಟಿದ್ದ ಗೌರವದಿಂದ ಬಾಬೂಜಿಯವರು ಪ್ರಭಾವಿತಗೊಂಡರು ಹಾಗು ಅವರ ಬಗ್ಗೆ ಮತ್ತೆ ಮತ್ತೆ ಉಚ್ಛ ಭಾವನೆಯಿಂದ ಮಾತನಾಡಿದರು.

ಡೆನ್ಮಾರ್ಕ್– ಬಾಬೂಜಿ ಮತ್ತು ಗುರುಗಳು ಕೋಪನ್‌ಹೇಗನ್ ತಲುಪಿದರು ಮತ್ತು ಅಭ್ಯಾಸಿಗಳಿಂದ ಅವರಿಗೆ ಭರ್ಜರಿ ಸ್ವಾಗತ ದೊರೆಯಿತು.

ಮೇ 12ರಂದು ಡ್ಯಾನಿಶ್ ರೇಡಿಯೋವು ತೆಗೆದುಕೊಂಡ ಬಾಬೂಜಿಯವರ ಸಂದರ್ಶನದಲ್ಲಿ ನಮ್ಮ ಗುರುಗಳೂ ಸಹ ಕೆಲವು ಸಂದೇಹನಿವಾರಣೆ ಮಾಡಿದ್ದಾರೆ. ಬೇರೆ ದೇಶಗಳಿಂದ ಅನೇಕ ಅಭ್ಯಾಸಿಗಳು ಬಾಬೂಜಿಯವರನ್ನು ನೋಡಲು ಡೆನ್ಮಾರ್ಕಿಗೆ ಬಂದಿದ್ದರು. ಕೋಪನ್‌ಹೇಗನ್ನಿನ ಸ್ಥಳೀಯ ವಾರ್ತಾಪತ್ರಿಕೆಗಳಲ್ಲಿ ಜಾಹೀರಾತು ನೀಡಿ ನಡೆಸಿದ ಸಾರ್ವಜನಿಕ ಸಭೆಗಳಲ್ಲಿ ಸಹಜಮಾರ್ಗವನ್ನು ಪರಿಚಯಿಸಲಾಯಿತು ಹಾಗೂ 300ಕ್ಕೂ ಹೆಚ್ಚು ಜನ ಹಾಜರಿದ್ದರು.



## ವಿಬಿಎಸ್‌ಇ ತರಬೇತಿ ಕಾರ್ಯಾಗಾರ, ಚೆನ್ನೈ

ಚೆನ್ನೈನ ಬಾಬೂಜಿ ಮೆಮೋರಿಯಲ್ ಆಶ್ರಮದಲ್ಲಿ ದಕ್ಷಿಣ ವಲಯದ ಅಭ್ಯಾಸಿಗಳಿಗಾಗಿ ಏಪ್ರಿಲ್‌ನ ಕೊನೆ ವಾರದಲ್ಲಿ 3 ದಿನಗಳ ಕಾರ್ಯಾಗಾರವೊಂದನ್ನು ನಡೆಸಲಾಯಿತು. ಶಾಲೆಗಳ 3 ಮುಖ್ಯೋಪಾಧ್ಯಾಯರು, ಡಜ಼ನ್ನಿಗೂ ಹೆಚ್ಚು ಶಿಕ್ಷಕರನ್ನೊಳಗೊಂಡ ಸುಮಾರು 75 ಅಭ್ಯಾಸಿಗಳು ಅತ್ಯಂತ ಉತ್ಸುಕತೆಯಿಂದ ಪಾಲ್ಗೊಂಡರು. LMOIS ಮತ್ತು SMRTI ಜತೆಗೂಡಿ ತಯಾರಿಸಿದ ಹೊಸ ಪಠ್ಯಕ್ರಮವನ್ನು ಚರ್ಚಿಸಲಾಯಿತು ಮತ್ತು ವಿಷಯಗಳು, ವಿದ್ಯಾರ್ಥಿಗಳ ಅಂಕಪಟ್ಟಿಗಳು ಮತ್ತು ಪಾಲಕರಿಗಾಗಿ ಸಿದ್ಧಪಡಿಸಿದ ಅನಿಸಿಕೆ ವ್ಯಕ್ತಪಡಿಸುವ ಫಾರ್ಮ್‌ಗಳ ಬಗ್ಗೆ ಭಾಗವಹಿಸಿದವರಿಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಕೇಳಿಕೊಳ್ಳಲಾಯಿತು. ಭಾಗಿಗಳಿಂದ ಅನೇಕ ವಿಷಯಗಳು ತಿಳಿದುಬಂದದ್ದರಿಂದ ಇದು ಫಲಕೊಟ್ಟಿತು.

ಪಠ್ಯಕ್ರಮವು ತಯಾರಾಗುತ್ತಿದ್ದು, ಪ್ರಾಥಮಿಕ ಶಾಲಾ ಪಠ್ಯಕ್ರಮವು ಬೇಗನೇ ಸಿದ್ಧಗೊಳ್ಳುತ್ತದೆ.

## ವಿಬಿಎಸ್‌ಇ ಬೇಸಿಗೆ ಶಿಬಿರ, ಭೋಪಾಲ್

ಮೇ 8 ಮತ್ತು 9, 2010 ರಂದು ಭೋಪಾಲ್ ಕೇಂದ್ರವು ಎರಡು ದಿನದ ವಿಬಿಎಸ್‌ಇ ಬೇಸಿಗೆ ಶಿಬಿರವನ್ನು ಏರ್ಪಡಿಸಿತ್ತು. ಶಿಬಿರಕ್ಕೆ ನೋಂದಣಿ ಮಾಡಿಸಿದ 76 ಮಕ್ಕಳಲ್ಲಿ 26 ಮಕ್ಕಳು ಅಭ್ಯಾಸಿಗಳಲ್ಲದ ಪರಿವಾರಕ್ಕೆ ಸೇರಿದ್ದರು.

ಮೊದಲ ದಿನದಂದು ಮಕ್ಕಳನ್ನು ಗುಲಾಬಿ ಹೂಗಳೊಡನೆ ಸ್ವಾಗತಿಸಲಾಯಿತು. 'ನಿಮ್ಮನ್ನು ನೀವು ವ್ಯಕ್ತಪಡಿಸಿ' ಚಟುವಟಿಕೆಯಲ್ಲಿ ಎಲ್ಲರೂ ತಮ್ಮ ಪರಿಚಯ ಮಾಡಿಕೊಂಡರು. ಮಗುವಿನ ಒಳ್ಳೆಯ ಮತ್ತು ಕೆಟ್ಟ ಅಭ್ಯಾಸಗಳ ಬಗೆಗಿನ ಅಣಕು ನಾಟಕವನ್ನು ಪ್ರಸ್ತುತ ಪಡಿಸಿದಾಗ ಮಕ್ಕಳೆಲ್ಲರೂ ಗಹನವಾಗಿ ಅವಲೋಕಿಸಿದರು. ದೇವರು, ಗುರು ಮತ್ತು ನಮ್ಮಲ್ಲಿನ ದೇವರ ಅಸ್ತಿತ್ವದ ಬಗೆಗೆ ಸಣ್ಣಪುಟ್ಟ ಚಟುವಟಿಕೆಗಳನ್ನು ಮಾಡಿಸಲಾಯಿತು. ಮಕ್ಕಳು ದೋಣಿ ಮಾಡುವಾಟ ಮತ್ತು ಓರಿಗಾಮಿಯನ್ನು ಸಂತಸದಿಂದ ಮಾಡಿದರು.

ಎರಡನೇ ದಿನದಂದು 'ಪ್ರಕೃತಿಯ ಮಡಿಲಲ್ಲಿ' ಎಂಬ ವಿಷಯದಲ್ಲಿ ಜೀವನದ ಪಂಚಭೂತಗಳಾದ ವಾಯು, ಪೃಥ್ವಿ, ಜಲ, ಅಗ್ನಿ ಮತ್ತು ಆಕಾಶಗಳನ್ನು ವಿವರಿಸಲಾಯಿತು. ಸಮಯ ನಿರ್ವಹಣೆ, ಮನದ ಸ್ವಚ್ಛತೆ, ವಿವಿಧ ಪರಿಸ್ಥಿತಿಗಳ ನಿರ್ವಹಣೆಗಳ ಮೇಲೆ ಸೂತ್ರದ ಗೊಂಬೆಗಳು ಮತ್ತು ಓರಿಗಾಮಿಯ ಮೂಲಕ ಚಟುವಟಿಕೆಗಳನ್ನು ಮಾಡಿಸಲಾಯಿತು. ಇದರೊಂದಿಗೆ ಜಲ ಸಂರಕ್ಷಣೆ, ಭ್ರಾತೃತ್ವ ಮತ್ತು ಮಾನವೀಯ ಮೌಲ್ಯಗಳ ಮೇಲೆ ಪ್ರಸ್ತುತಿಗಳನ್ನು ಮಾಡಲಾಯಿತು. ಪ್ರತೀ ಮಗುವೂ ಭಾಗವಹಿಸಲು ಅವರಿಗೆ ಕಿರುನಾಟಕ, ಶಿಶುಕಾವ್ಯಗಳು, ಹಾಡುಗಳು, ಸಮೂಹಗೀತೆಗಳಲ್ಲಿ ಭಾಗವಹಿಸುವಂತೆ ಹೇಳಲಾಯಿತು. ಮಕ್ಕಳಿಗೆ ಪ್ರತಿನಿತ್ಯ ಬೆಳಿಗ್ಗೆ ಮತ್ತು ಮಲಗುವ ಸಮಯ ಮಿಷನ್ನಿನ ಪ್ರಾರ್ಥನೆಯನ್ನು ಹೇಳುವಂತೆ ತಿಳಿಸಲಾಯಿತು. ಕೇಂದ್ರ ಮುಖ್ಯಸ್ಥರಾದ ಸೋ. ಪ್ರಭಾಕರ್ ದಾಸ್‌ರವರ ಮುಕ್ತಾಯಭಾಷಣದ ನಂತರ ಮಕ್ಕಳಿಗೆ ನೆನಪಿನ ಕಾಣಿಕೆಯನ್ನು ಹಂಚುವುದರೊಂದಿಗೆ ಶಿಬಿರವನ್ನು ಕೊನೆಗೊಳಿಸಲಾಯಿತು.



# ವಿಬಿಎಸ್‌ಇ ಚಟುವಟಿಕೆಗಳು

**ಮುಜ಼ಫ್ಫರ್‌ಪುರ** ಕೇಂದ್ರದ ಹಲವು ಕಡೆ ಏಪ್ರಿಲ್ 12ರಿಂದ 17ರವರೆಗೆ ಅನೇಕ ವಿಬಿಎಸ್‌ಇ ಮತ್ತು ಮುಕ್ತಸಭೆಗಳನ್ನು ನಡೆಸಲಾಯಿತು. ಆಯೋಜಕ ತಂಡವು ಶ್ರೀ ಆರ್.ಎಸ್.ಚೌಹಾನ್, ಡೆಹ್ರಾಡೂನಿನ ಲೆಫ್ಟಿನೆಂಟ್ ಕರ್ನಲ್ ಡಾ.ಮನು ಚೋಪ್ರಾ, ಗಾಜ಼ಿಯಾಬಾದ್‌ನ ಸೋ. ಚಂದ್ರಕಾಂತಾ, ಶ್ರೀಮತಿ ಮಧು ಮೊಹಿಲ್ಲಾ, ಕರ್ನಲ್ ಅನಿಲ್ ಕುಮಾರ್ ಮತ್ತು ಕೇಂದ್ರ ಮುಖ್ಯಸ್ಥ ಸೋ.ಸಂಜೀವ್ ಭಾರತಿಯವರನ್ನು ಒಳಗೊಂಡಿತ್ತು. ಹೆಚ್ಚು ಪರಿಣಾಮಕಾರಿಯಾಗಿರಲು ತಂಡವು ಶಾಲಾ ಕಾಲೇಜು ಶಿಕ್ಷಕರು ಮತ್ತು ಸೈನ್ಯದ ಅಧಿಕಾರಿಗಳೊಡನೆ ಚರ್ಚಿಸಿತು.



ಏಪ್ರಿಲ್ 12ರಂದು ಬಿಹಾರ್ ಮತ್ತು ಜಾರ್ಖಂಡ್‌ನ ವಲಯ ಮುಖ್ಯಸ್ಥರಾದ ಸೋ. ಜಿ.ಎಂ.ಭಟ್ನಾಗರ್‌ರವರ ಸಮ್ಮುಖದಲ್ಲಿ ವಿಬಿಎಸ್‌ಇ ನ ಚಟುವಟಿಕೆಗಳು ಪಾಟ್ನಾ ಕೇಂದ್ರದ ಕಾರ್ಯಕ್ರಮದೊಂದಿಗೆ ಪ್ರಾರಂಭಗೊಂಡವು. ಬಿಹಾರದ ವಿವಿಧ ಕೇಂದ್ರಗಳ ಸುಮಾರು 50 ಅಭ್ಯಾಸಿಗಳು ಇದರಲ್ಲಿ ಉಪಸ್ಥಿತರಿದ್ದರು.

ತಂಡವು ನಂತರ ಮುಜ಼ಫ್ಫರ್‌ಪುರ ಕೇಂದ್ರಕ್ಕೆ ತಲುಪಿ ಏಪ್ರಿಲ್ 13ರಂದು ದಯಾಲು ಕಾಲೇಜಿನಲ್ಲಿ ಕಾರ್ಯಕ್ರಮವೊಂದನ್ನು ನಡೆಸಿಕೊಟ್ಟರು.

ಮುಜ಼ಫ್ಫರ್‌ಪುರದ 151 INF Bn (TA) JAT ದಲ್ಲಿ ಏಪ್ರಿಲ್ 14ರಂದು ಯೋಜಿಸಲಾದ ಮುಕ್ತಸಭೆಯಲ್ಲಿ ಸೋ. ಚಂದ್ರಕಾಂತಾ ಮತ್ತು ಸೋ. ಮಧು ಮೊಹಿಲ್ಲಾರವರು ಪ್ರಾತ್ಯಕ್ಷಿಕೆಗಳೊಡನೆ ವಿಬಿಎಸ್‌ಇ ನ ಪ್ರಾಮುಖ್ಯತೆಯನ್ನು ವಿವರಿಸಿದರು. 125ಕ್ಕೂ ಅಧಿಕ ಅಭ್ಯಾಸಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಏಪ್ರಿಲ್ 15ರಂದು ಹೋಲಿ ಮಿಷನ್ ಪ್ರೌಢಶಾಲೆಯ ಶಿಕ್ಷಕರೊಡನೆ ನಡೆಸಿದ ಚರ್ಚೆಯು ಸ್ವಾರಸ್ಯಭರಿತ ಹಾಗೂ ಫಲಕಾರಿಯಾಗಿತ್ತು. ಕರ್ನಲ್ ಅನಿಲ್ ರೋಹಿಲ್ಲಾರವರು ಅಧ್ಯಾತ್ಮದ ಅರ್ಥವನ್ನು ಪ್ರೇಕ್ಷಕರಿಗೆ ತಿಳಿಸಿದರು.

ಏಪ್ರಿಲ್ 16ರಂದು ಮಾಲಿಘಾಟ್‌ನ DAV ಪಬ್ಲಿಕ್ ಶಾಲೆಯಲ್ಲಿ ವಿಬಿಎಸ್‌ಇ ನ ಕಾರ್ಯಕ್ರಮ ನಡೆಸಲಾಗಿದ್ದು ಸುಮಾರು 50 ಶಿಕ್ಷಕರು ಭಾಗವಹಿಸಿದರು.

ಏಪ್ರಿಲ್ 17ರಂದು ಮಧುಬನಿಯಲ್ಲಿ ನಡೆದ ಮುಕ್ತಸಭೆಯಲ್ಲಿ ಸುಮಾರು 60 ಶಿಕ್ಷಕರು ಪಾಲ್ಗೊಂಡಿದ್ದು ಅವರೆಲ್ಲರೂ ವಿಬಿಎಸ್‌ಇ ನ ತರಗತಿಗಳಲ್ಲೂ ಹಾಜರಿದ್ದರು. ಮಧುಬನಿಯು ಮುಜ಼ಫ್ಫರ್‌ಪುರದಿಂದ ಸುಮಾರು 110 ಕಿ.ಮೀ. ದೂರದಲ್ಲಿದೆ.

**ಜಾಮ್‌ನಗರ** ಕೇಂದ್ರದಲ್ಲಿ 5–13 ವಯೋಮಾನದ ಮಕ್ಕಳಿಗಾಗಿ ಮೂರನೇ ಒಂದು ತಿಂಗಳ ವಿಬಿಎಸ್‌ಇ ಕಾರ್ಯಾಗಾರವು ಮೇ 5ರಿಂದ ಪ್ರಾರಂಭವಾಯಿತು. ಭಾಗವಹಿಸಿದ 80 ಮಕ್ಕಳಲ್ಲಿ 40 ಮಕ್ಕಳು ನಿಯಮಿತವಾಗಿ ಹಾಜರಿರುವವರು. ಕಾರ್ಯಾಗಾರದಲ್ಲಿ ಗುರು, ದೇವರು, ಪ್ರೇಮ, ಪ್ರಾರ್ಥನೆ, ಶಿಸ್ತು ಮತ್ತು ವಿನಯ ಮುಂತಾದ ವಿಷಯಗಳನ್ನು ಒಳಗೊಂಡಿತ್ತು. ಪ್ರತಿನಿತ್ಯ ಮಕ್ಕಳು ಪ್ರಾರ್ಥನೆಯನ್ನು ಹೇಳಿದ ನಂತರ ಅವರಿಗೆ ತಮ್ಮ ಇಚ್ಛೆಯ ಆಟವನ್ನಾಡಲು ಪ್ರೋತ್ಸಾಹಿಸಲಾಯಿತು.

ಕಾರ್ಯಾಗಾರದ ಕೊನೇ ದಿನದಂದು ಧ್ಯಾನಮಂದಿರದಲ್ಲಿ ನಡೆದ ಮುಕ್ತಾಯ ಸಮಾರಂಭಕ್ಕೆ ಮಕ್ಕಳ ಪಾಲಕರನ್ನು ಆಹ್ವಾನಿಸಲಾಗಿತ್ತು. ಮಕ್ಕಳು ಪ್ರಸ್ತುತ ಪಡಿಸಿದ ಅನೇಕ ಕಾರ್ಯಕ್ರಮಗಳನ್ನು ವೀಕ್ಷಿಸಲು 100ಕ್ಕೂ ಅಧಿಕ ಸಂಖ್ಯೆಯಲ್ಲಿ ಜನ ನೆರೆದಿದ್ದರು. ಭಾಗವಹಿಸಿದವರಿಗೆ ಸೌಂದರ್ಯ ಮತ್ತು ಕಾಳಜಿಯ ಪ್ರತೀಕವಾದ ಗುಲಾಬಿ ಸಸ್ಯಗಳನ್ನು ನೀಡಲಾಯಿತು. ಕಾರ್ಯಾಗಾರದ ನಂತರ ಮಕ್ಕಳು ದೂರದರ್ಶನ ವೀಕ್ಷಣೆಯನ್ನು ಕಡಿಮೆ ಮಾಡಿರುವುದನ್ನು ಪಾಲಕರು ಗಮನಿಸಿದರು. ಅದಲ್ಲದೆ ಅವರು ಪ್ರತಿನಿತ್ಯ ಬೆಳಿಗ್ಗೆ, ಭೋಜನಕ್ಕಿಂತ ಮೊದಲು ಹಾಗೂ ಮಲಗುವ ಮುನ್ನ ಪ್ರಾರ್ಥನೆ ಮಾಡುವುದನ್ನೂ ಕಲಿತರು.

ಮೇ 16–17ರಂದು ಮಧ್ಯಪ್ರದೇಶದ **ವಿದಿಷಾ** ಕೇಂದ್ರದಲ್ಲಿ ಎರಡು ದಿನಗಳ ವಿಬಿಎಸ್‌ಇ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು. ಮೊದಲನೇ ದಿನದಂದು ವಿಷಯಗಳು 'ಭಗವಂತ ಮತ್ತು ಗುರು' ಹಾಗೂ 'ವಿನಯವಂತರಾಗಿರಿ ಮತ್ತು ಇತರರನ್ನು ಗೌರವಿಸಿ' ಎಂಬುದಾಗಿದ್ದವು. ಸೋ.ಅಂಜಲಿ ಮತ್ತು ಸೋ.ಪ್ರಮೋದ್‌ರವರು ಸ್ವಯಂಸೇವಕರ ತಂಡದೊಡನೆ ಅನೇಕ ಕಿರುನಾಟಕಗಳು, ಆಟಗಳು ಮತ್ತು ವೈಜ್ಞಾನಿಕ ಪ್ರಯೋಗಗಳ ಮೂಲಕ ಈ ಮೌಲ್ಯಗಳನ್ನು ಪ್ರತಿಪಾದಿಸಿದರು. ಎರಡನೇ ದಿನದಂದು 'ಶಿಸ್ತುಪಾಲನೆ' ವಿಷಯವನ್ನು ಕೇಂದ್ರೀಕರಿಸಿ ಅನೇಕ ಚಟುವಟಿಕೆಗಳನ್ನು ನಡೆಸಲಾಯಿತು. ಮಕ್ಕಳಿಗೆ ದೈಹಿಕ ಆರೋಗ್ಯದ ಅಗತ್ಯವನ್ನು ವಿವರಿಸಲು ಯೋಗವನ್ನು ಹೇಳಿಕೊಡಲಾಯಿತು.

## ಜಾವೊರ



ಮೇ12–13ರಂದು ಇಂದೋರ್‌ನ ಜಾವೊರದಲ್ಲಿ ಮಕ್ಕಳಿಗಾಗಿ ವಿಬಿಎಸ್‌ಇ ನ 9 ದಿನಗಳ ವಸತಿ ಶಿಬಿರವನ್ನು ಜೈನ್ ಯುವಸಮಿತಿಯವರು ಆಯೋಜಿಸಿದ್ದರು.

ವಿಬಿಎಸ್‌ಇ ಕಾರ್ಯಕ್ರಮವು ಶಿಬಿರದ ಕೊನೆಯ ಎರಡು ದಿನಗಳಂದು ನಡೆಸಲಾಯಿತು. ಹತ್ತು ಸ್ವಯಂಸೇವಕ ಸೋದರ ಸೋದರಿಯರು ನಡೆಸಿದ ಈ ಕಾರ್ಯಕ್ರಮದಲ್ಲಿ 5 ವಿಭಾಗಗಳಿದ್ದವು; ಐದು ಮೌಲ್ಯಗಳಾದ ಪ್ರೇಮ, ಗೌರವ, ಸಂಭಾಷಣೆ ಮತ್ತು ಶ್ರವಣ, ಸಹಕಾರ ಹಾಗೂ ಹಂಚಿಕೊಳ್ಳುವಿಕೆ. 'ಮೌಲ್ಯಗಳ ಔಚಿತ್ಯ– ಸ್ವತಃದೊಡನೆ' 'ಸುತ್ತಲಿನ ಪರಿಸರದೊಡನೆ' ಮತ್ತು 'ಅವರೊಡನೆ' ಎಂಬ ವಿಷಯಗಳನ್ನು ಮೂರು ಭಾಗಗಳಲ್ಲಿ ನಡೆಸಲಾಯಿತು.

13–16 ವಯೋಮಾನದ ಸುಮಾರು 40 ಮಕ್ಕಳು ಹಾಜರಿದ್ದರು. ಸೋ. ಯಾಮಿನಿ ಕರ್ಮಾರ್ಕರ್ ಹಾಗೂ ಸೋ. ರಾಜೇಶ್ ರವೇರ್ಕರ್‌ರವರು ಹಲವಾರು ಉದಾಹರಣೆಗಳು ಮತ್ತು ಪ್ರಯೋಗಗಳ ಮೂಲಕ ಮೊದಲ ಕೆಲ ಸಮಯ ನಡೆಸಿಕೊಟ್ಟರು. ಕೊನೆಯಲ್ಲಿ ಮೌಲ್ಯಗಳೇ ನಮ್ಮನ್ನು ಪ್ರಗತಿ, ಆನಂದ ಮತ್ತು ಬೆಳಕಿನ ಕಡೆಗೆ ಕರೆದೊಯ್ಯುವುದೆಂದು ಮಕ್ಕಳೆಲ್ಲ ಅಭಿಪ್ರಾಯ ಪಟ್ಟರು.

ಪ್ರಾಯೋಗಿಕ ಸಮಯದಲ್ಲಿ ದೈಹಿಕ ಭಾಷೆಯನ್ನು ತಿಳಿದುಕೊಂಡು ಅದರ ಪ್ರಕಾರ ಉತ್ತಮ ಆರೋಗ್ಯ ಪಡೆಯುವುದು, ಯೋಗ್ಯ ಮನೋವೃತ್ತಿ, ಸೋಲೇ ಗೆಲುವಿನ ಮೆಟ್ಟಿಲು, ಮತ್ತು ಸೂಕ್ತ ಮಾರ್ಗದ ನಿರ್ಮಾಣ, ಹಿರಿಯರಿಗೆ ಗೌರವ ನೀಡುವುದು, ಸಂಭಾಷಣೆ, ಸಹಕಾರ, ಇತರರ ಬಗೆಗಿನ ಕಾಳಜಿ ಮತ್ತು ಹಂಚಿಕೊಳ್ಳುವಿಕೆ

ಮುಂತಾದವುಗಳನ್ನು ಹೇಳಲಾಯಿತು. ಸೋ. ಶೇಖರ್ ಶರ್ಮಾ, ಸೋ.ಪ್ರೀತಿ ಶರ್ಮಾ ಮತ್ತು ಸೋ.ವಿನಿತಾ ರವೇರ್ಕರ್‌ರವರು ಇವುಗಳನ್ನು ಕಥೆಗಳು, ಕಿರುನಾಟಕಗಳು, ವೈಜ್ಞಾನಿಕ ಪ್ರಯೋಗಗಳ ಸಹಾಯದೊಡನೆ ವಿವರಿಸಿದರು. ಈ ಸಮಯವು ನಗು ಮತ್ತು ಕಣ್ಣೀರಿನಲ್ಲಿ ಕಳೆದರೂ ಸಂದೇಶ ನೀಡುವುದರಲ್ಲಿ ಯಶಸ್ವಿಯಾಯಿತು.

ಮೂರನೇ ಸಭೆಯಲ್ಲಿ ಸರ್ವಶಕ್ತನ ಮೌಲ್ಯಗಳ ಮೇಲೆ ಕೇಂದ್ರೀಕೃತವಾಗಿತ್ತು. ಅವನು ನಮ್ಮಲ್ಲೇ ಇರುವುದರಿಂದ ಅವನ ಮೇಲಿನ ಪ್ರೀತ್ಯಾದರಗಳು ನಮ್ಮೊಡನಿರುವವರ ಮೇಲೆ ಪ್ರೀತ್ಯಾದರ ತೋರುವುದು ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನು ಆದರಿಸಿ, ಸೂಕ್ತ ಉಪಯೋಗ ಮಾಡುವುದರ ಮೂಲಕ ಸಾಧಿಸಿ. ಕೊನೆಯಲ್ಲಿ ಅಭ್ಯಾಸಿಗಳನ್ನು ನಾಲ್ಕು ತಂಡಗಳನ್ನಾಗಿ ವಿಂಗಡಿಸಿ ಅವರು ನೀಡಲಾದ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತ ಪಡಿಸಲು ಅವಕಾಶ ಕಲ್ಪಿಸಲಾಯಿತು. ಸಭೆಯನ್ನು ಸೋ.ವಿನೋದ್ ಸಾಠೆ, ಸೋ.ಶ್ರೀರಾಮ್ ದ್ರಾವಿಡ್ ಮತ್ತು ಸೋ.ರಾಜೇಶ್‌ರವರು ನಡೆಸಿಕೊಟ್ಟರು.

ಮಕ್ಕಳನ್ನು ಅವರು ತಮ್ಮ ಜೀವನದಲ್ಲಿ ತರಲಿಚ್ಛಿಸುವ ಬದಲಾವಣೆಗಳನ್ನು ಪಟ್ಟಿ ಮಾಡಲು ಹೇಳಲಾಯಿತು. ಅಂಶಗಳು ಚಿಕ್ಕವಾದರೂ ಪ್ರಾಯೋಗಿಕವಾಗಿದ್ದವು. ಮಕ್ಕಳ ಸ್ಪಂದನವು ಸ್ವಯಂಸೇವಕ ತಂಡಕ್ಕೆ ಹರುಷ ತಂದಿತು. ವಿಬಿಎಸ್‌ಇ ಮೂಲಕ ನಮ್ಮ ಗುರುಗಳು ನೀಡಿದ ಮುಕ್ತತೆ, ವಿಧೇಯತೆ ಮತ್ತು ದೈವೀಕತೆಯು ಅವರ ಹೃದಯ ತಟ್ಟಿತು.

ಮುಕ್ತಾಯ ಸಮಾರಂಭದಲ್ಲಿ ಆಯೋಜಕ ತಂಡದ ಸದಸ್ಯರು, ನಗರದ ಇತರೆ ಸಮಾಜಸೇವಕರನ್ನು ಆಹ್ವಾನಿಸಿದ್ದರು. ಅವರಿಗೆ ಸೋ.ರಾಜೇಶ್‌ರವರು ಮಿಷನ್ನಿನ ಕಿರುಪರಿಚಯ ನೀಡಿದರು.

## ಹೊಸ ಪ್ರಭಾಕೇಂದ್ರಗಳು

### ಕಾಸರಗೋಡು, ಕೇರಳ

ಮೇ 2, 2010ರಂದು ಕಾಸರಗೋಡಿನ ಧ್ಯಾನಮಂದಿರವನ್ನು ಉದ್ಘಾಟಿಸಲಾಯಿತು. ಕಾಸರಗೋಡು ಕೇಂದ್ರವು ಜನವರಿ 2007ರಂದು ಅಸ್ತಿತ್ವಕ್ಕೆ ಬಂದಿತು. ಕೇರಳದ ಉತ್ತರತುದಿಯಲ್ಲಿನ ಕಾಸರಗೋಡಿನಿಂದ ಇದು ಸುಮಾರು 16 ಕಿ.ಮೀ. ದೂರದ ಬೇಲಾ ಎಂಬ ಗ್ರಾಮದಲ್ಲಿದೆ. ಕಣ್ಣಿನ ಆಸ್ಪತ್ರೆಯ ಬಹುಪಾಲು ಉದ್ಯೋಗಿಗಳು ಅಭ್ಯಾಸಿಗಳಾದ್ದರಿಂದ ಧ್ಯಾನಮಂದಿರವು ಆಸ್ಪತ್ರೆಯ ಮಧ್ಯಭಾಗದಲ್ಲಿದೆ. ಪಯಣ್ಣೂರಿನ ಕೇಂದ್ರ ಮುಖ್ಯಸ್ಥರಾದ ಸೋ. ಕುನ್ಹಿಕಣ್ಣನ್‌ರವರು 7.30ಕ್ಕೆ ನಡೆಸಿಕೊಟ್ಟ ಸತ್ಸಂಗದಲ್ಲಿ 60 ಅಭ್ಯಾಸಿಗಳು ಹಾಜರಿದ್ದರು. ಅವರು ಉದ್ಘಾಟನಾ ಶಿಲೆಯನ್ನು ಅನಾವರಣಗೊಳಿಸಿದ ನಂತರ ಅತಿಥಿಗಳ ಭಾಷಣ ಹಾಗೂ ಮಕ್ಕಳು ಮತ್ತು ಉದ್ಯೋಗಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳಿದ್ದವು. ಸೋ. ಕುನ್ಹಿಕಣ್ಣನ್‌ರವರು ಕೇಂದ್ರವು ಲೌಕಿಕತೆ ಮತ್ತು ಆಧ್ಯಾತ್ಮಿಕತೆಗಳ ಸಾಮರಸ್ಯದ ಉದಾಹರಣೆ ಎಂದು ಹೇಳಿದರು. ಆಸ್ಪತ್ರೆಯ ಅಧ್ಯಕ್ಷರಾದ ಸೋ. ನೀಲಕಂಠನ್‌ರವರು ಯೋಗ್ಯ ಜೀವನದ ಪ್ರಮುಖತೆ, ಶೌಚಪದ್ಧತಿಯ ಅಗತ್ಯ ಮತ್ತು ಪ್ರಾಕೃತಿಕ ನೈತಿಕತೆಯ ಕುರಿತು ಮಾತನಾಡಿದರು. ನಾಗ್ಪುರದ ಆದಾಯಕರ ಇಲಾಖೆಯ ಆಯುಕ್ತರಾದ ಸೋ. ಜಯಶಂಕರ್‌ರವರು ಮಾನವ ಜೀವನದಲ್ಲಿ ಸೇವೆಯ ಪ್ರಮುಖತೆಯನ್ನು ತಿಳಿಸಿದರು. ನಿರ್ದೇಶಕರಾದ ಸೋ. ಉಮೇಶ್, ಆಸ್ಪತ್ರೆಯ ನಿರ್ದೇಶಕ ಮತ್ತು ಪ್ರಶಿಕ್ಷಕರಾದ ಸೋ.ಡಾ.ಸುನಿಲ್ ಹಾಗೂ ವೈದ್ಯಕೀಯ ಸಲಹಾಗಾರರಾದ ಸೋ. ಡಾ.ಕೆ. ನಾರಾಯಣನ್ ಮತ್ತು ಸೇವನ ಟ್ರೇಡ್ಸ್‌ನ ಅಧ್ಯಕ್ಷ ಸೋ. ಫಿಲಿಪೋಸ್‌ರವರು ಸಹ ಈ ಸಂದರ್ಭದಲ್ಲಿ ಮಾತನಾಡಿದರು. ಈ ದಿನದಂದು ಸಕಲರ ಮೇಲೆ ಗುರುಗಳ ಅನುಗ್ರಹ ಸುರಿಯುತ್ತಿದ್ದುದು ಖಚಿತ.

### ಟಿಟೋಡಿ, ಸೌರಾಷ್ಟ್ರ






ಗುರುಗಳ ಅನುಗ್ರಹದಿಂದ ಕಳೆದ 2–3 ತಿಂಗಳುಗಳಿಂದ ಸೌರಾಷ್ಟ್ರ ವಲಯದಲ್ಲಿ ಅದರಲ್ಲೂ ಜಾಮ್‌ನಗರದಿಂದ ದ್ವಾರಕಾವರೆಗಿನ ಪ್ರದೇಶಗಳಲ್ಲಿ ಮಿಷನ್ನಿನ ಚಟುವಟಿಕೆಗಳ ಬೆಳವಣಿಗೆಯಾಗಿದೆ. ಜೂನ್ 13ರ ಭಾನುವಾರದಂದು ಗುಜರಾತ್‌ನ ವಲಯ ಮುಖ್ಯಸ್ಥರಾದ ಸೋ.ರಾಜೇಶ್ ಅಗರ್‌ವಾಲ್‌ರವರು ಖಂಬಾಲಿಯಾ ಸಮೀಪದ ಟಿಟೋಡಿಗೆ ಭೇಟಿ ನೀಡಿದರು. ಟಿಟೋಡಿ ಕೇಂದ್ರದಲ್ಲಿ ಮೊದಲು ಕೇವಲ 7 ಅಭ್ಯಾಸಿಗಳು ನಿಯಮಿತವಾಗಿ ಬರುತ್ತಿದ್ದರು. ಅನಿಯಮಿತವಾಗಿ ಬರುವವರನ್ನು ಸಂಪರ್ಕಿಸಲು ಅವರನ್ನು ಕೇಳಿಕೊಳ್ಳಲಾಯಿತು. ಗುರುಗಳ ಅನುಗ್ರಹದಿಂದ ಭಾನುವಾರದ ಸತ್ಸಂಗದಲ್ಲಿ 20 ಅಭ್ಯಾಸಿಗಳು ಉಪಸ್ಥಿತರಿರುತ್ತಾರೆ. ವಲಯ ಮುಖ್ಯಸ್ಥರು ಮತ್ತು 25 ಸ್ಥಳೀಯ ಅಭ್ಯಾಸಿಗಳ ಸಮ್ಮುಖದಲ್ಲಿ ಖಂಬಾಲಿಯಾ ಕೇಂದ್ರದ ಮುಖ್ಯಸ್ಥರಾದ ಸೋ.ಭಾವಿನ್ ಪಟೇಲ್‌ರವರು ಧ್ಯಾನಮಂದಿರವನ್ನು ಉದ್ಘಾಟಿಸಿದರು. ಟಿಟೋಡಿಯು ಮೂರು ವರ್ಷಗಳಿಂದ ಮಿಷನ್ನಿನ ಕೇಂದ್ರವಾದ ಸೌರಾಷ್ಟ್ರದ ಒಂದು ಪುಟ್ಟ ಗ್ರಾಮವಾಗಿದೆ. ಈ ಗ್ರಾಮದ ಜನಸಂಖ್ಯೆಯು ಸುಮಾರು 2500ರಷ್ಟಿದೆ.

### ಗುಜರಾತ್‌ನ ಜಾಮ್‌ನಗರದಲ್ಲಿ ಜಾಗತಿಕ ಪರಿಸರ ದಿನದಂದು ಗಿಡ ನೆಡುವಿಕೆ

ಜಾಗತಿಕ ಪರಿಸರ ದಿನವಾದ ಜೂನ್ 5ರಂದು ಜಾಮ್‌ನಗರದ ವೈದ್ಯಕೀಯ ವಿದ್ಯಾಲಯದ ಯುವಅಭ್ಯಾಸಿಗಳು ಗಿಡ ನೆಡುವು . ಅವರು ಜಾಮ್‌ನಗರ ಕೇಂದ್ರದ ಮುಖ್ಯಸ್ಥರಾದ ಸೋ. ಸಚಿನ್ ವ್ಯಾಸ್‌ರವರು ಮತ್ತುಇತರ ಅಭ್ಯಾಸಿಗಳೊಂದಿಗೆ ತಮ್ಮ ವಿದ್ಯಾಲಯದ ಆವರಣದಲ್ಲಿ ಗಿಡಗಳನ್ನು ನೆಟ್ಟರು. ಸಂಜೆ ಜಾಮ್‌ನಗರ ನಗರ ಪಾಲಿಕೆಯ ಸದಸ್ಯರಾದ ಶ್ರೀಮತಿ ಹರ್ಷಿತಾ ಪಂಡ್ಯ, ಶ್ರೀಮತಿ ಸಹಾರಾ ಮಕ್ವಾನ, ಮತ್ತು ಸೋ. ಸಗೋಯಾರವರನ್ನು ಆಹ್ವಾನಿಸಲಾಗಿತ್ತು. 40 ಮಕ್ಕಳು ಮತ್ತು ಅವರ ಪಾಲಕರು ಕಾರ್ಯಕ್ರಮವನ್ನು ಪ್ರೋತ್ಸಾಹಿಸಲು ಹಾಜರಿದ್ದರು.







## ಅಭ್ಯಾಸಿ ತರಬೇತಿ ಕಾರ್ಯಕ್ರಮ

### ಗ್ವಾಲಿಯರ್



ಗುರುಗಳ ಕೃಪೆಯಿಂದ ಗ್ವಾಲಿಯರ್ ನಲ್ಲಿ ಮೇ 14ರಿಂದ 16ರವರೆಗೆ ಒಂದು ಅಭ್ಯಾಸಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಇದರಲ್ಲಿ ಗ್ವಾಲಿಯರ್ ಮತ್ತು ಹತ್ತಿರದ ಕೇಂದ್ರಗಳಿಂದ 31 ಜನ ಅಭ್ಯಾಸಿಗಳು ಪಾಲ್ಗೊಂಡಿದ್ದರು. ತರಬೇತಿ ಹೊಂದಲಿರುವ ಅಭ್ಯಾಸಿಗಳು ಮೇ 14ರಂದು ಕಲೆತು ಪ್ರತ್ಯೇಕ ಬೈಠಕ್ಕುಗಳನ್ನು ತೆಗೆದುಕೊಂಡು ಸಿದ್ಧರಾದರು. ಸಂಜೆ 7-00 ಗಂಟೆಗೆ ನಡೆಸಲಾದ ಸತ್ಸಂಗದ ನಂತರ ಸ್ವಾಗತಭಾಷಣ ಮತ್ತು ತರಬೇತಿ ಕಾರ್ಯಕ್ರಮದ ಉದ್ದೇಶ ಮತ್ತು ಮಾರ್ಗಸೂಚಿಯನ್ನು ತಿಳಿಸಿಕೊಡಲು ಒಂದು ನಾಟಕವನ್ನು ಅಭ್ಯಾಸಿಗಳಿಗೆ ತೋರಿಸಲಾಯಿತು. ಮೇ 15ರಂದು, ಮೊದಲನೆಯ ಕಾಲಾವಧಿಯಲ್ಲಿ "ಗುರಿಯನ್ನು ಗುರುತಿಸುವ ಪ್ರಾಮುಖ್ಯತೆ" ಮತ್ತು "ಧ್ಯಾನ ಮತ್ತು ಸಾಮೂಹಿಕ ಸತ್ಸಂಗ" ಎಂಬ ವಿಷಯಗಳ ಬಗ್ಗೆ ಭಾಷಣಗಳಿದ್ದವು. ಇದರ ನಂತರ ಈ ವಿಷಯಗಳ ಮೇಲೆ ಗುಂಪು-ಚರ್ಚೆ ಮತ್ತು ಪ್ರಶ್ನೋತ್ತರಗಳು ನಡೆದವು.

ಎರಡನೆಯ ಕಾಲಾವಧಿಯು 'ಶುದ್ಧೀಕರಣ' ಮತ್ತು 'ಧ್ಯಾನ ಮತ್ತು ದಿನಚರಿ ಬರೆಯುವಿಕೆ' ಎಂಬ ವಿಷಯಗಳ ಮೇಲೆ ಭಾಷಣ, ಗುಂಪು-ಚರ್ಚೆ ಮತ್ತು ಪ್ರಶ್ನೋತ್ತರ ಕಾರ್ಯಕ್ರಮಗಳನ್ನೊಳಗೊಂಡಿತ್ತು. ಮೂರನೆಯ ಕಾಲಾವಧಿಯಲ್ಲಿ 'ಹತ್ತು ನಿಯಮಗಳು' ಎಂಬ ವಿಷಯದ ಬಗ್ಗೆ ಭಾಷಣ ಮತ್ತು ವಿಚಾರ ವಿನಿಮಯಗಳು ನಡೆದವು.ಇದರಲ್ಲಿ ಮೊದಲ ಮೂರು ನಿಯಮಗಳ ಬಗ್ಗೆ ಚರ್ಚೆ ನಡೆಸಲಾಯಿತು.

ಮೇ 16ರಂದು, ಮೊದಲನೆಯ ಕಾಲಾವಧಿಯು ಹಿಂದಿನ ದಿನದ ವಿಷಯದಿಂದ ಮುಂದುವರೆದು, ಕೊನೆಯ ಏಳು ನಿಯಮಗಳನ್ನು ಒಳಗೊಂಡಿತ್ತು. ಎರಡನೆಯ ಕಾಲಾವಧಿಯಲ್ಲಿ, 'ಪ್ರಾರ್ಥನೆ ಮತ್ತು ನಿರಂತರ ಸ್ಮರಣೆ'ಯ ಬಗ್ಗೆ ಭಾಷಣಗಳು, ಗುಂಪು-ಚರ್ಚೆ ಮತ್ತು ಪ್ರಶ್ನೋತ್ತರಗಳು ನಡೆದವು. ಮೂರನೆಯ ಕಾಲಾವಧಿಯು 'ಪ್ರೇಮ ಮತ್ತು ಕೃತಜ್ಞತೆ'ಯ ಬಗ್ಗೆ ಭಾಷಣವನ್ನು ಒಳಗೊಂಡಿತ್ತು.

ಎಲ್ಲ ದಿನಗಳೂ ಮುಂಜಾನೆ 4-00ಗಂಟೆಗೆ ಬೆಳಿಗ್ಗೆಯ ಧ್ಯಾನ, ಅಂತರಂಗ ಶೋಧನೆ, ಸಾಹಿತ್ಯಪಠಣ ಮತ್ತು ಮೌನಾಚರಣೆಯೊಂದಿಗೆ ಪ್ರಾರಂಭವಾಗುತ್ತಿದ್ದವು. ಸಂಜೆಯ ಹೊತ್ತಿನಲ್ಲಿ ಪ್ರತ್ಯೇಕ ಬೈಠಕ್, ಶುದ್ಧೀಕರಣ, ವಿಶ್ವ ಪ್ರಾರ್ಥನೆ ಮತ್ತು ಭಜನೆಗಳು ನಡೆಯುತ್ತಿದ್ದವು.

### ದೆಹಲಿ

ಅಭ್ಯಾಸಿ ತರಬೇತಿ ಕಾರ್ಯಕ್ರಮ ಸ್ತರ-1 ಅನ್ನು ದೆಹಲಿಯ ಆರ್. ಕೆ. ಪುರಂ ಕೇಂದ್ರದಲ್ಲಿ ಮೇ 23, 2010ರಂದು ಆಯೋಜಿಸಲಾಯಿತು. ದೆಹಲಿ ಮತ್ತು ಗುರಗಾಂವ್ ಕೇಂದ್ರಗಳಿಂದ ಒಟ್ಟು 36 ಅಭ್ಯಾಸಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸೋದರ ಗ್ಯಾನ್ ಸರಿನ್ ಅವರು ಈ ಕಾರ್ಯಕ್ರಮವನ್ನು ಪ್ರಸ್ತುತಪಡಿಸಿದರು. ಭಾನುವಾರದ ಸತ್ಸಂಗದ ನಂತರ ಬೆಳಿಗ್ಗೆ 9-30 ಗಂಟೆಗೆ ಈ ಸಭೆಯು ಪ್ರಾರಂಭವಾಗಿ, ಮಧ್ಯಾಹ್ನ ಸುಮಾರು 2-30ರವರೆಗೆ ನಡೆಯಿತು. ಈ ಕಾರ್ಯಕ್ರಮವು ಬಹಳ ಚೆನ್ನಾಗಿ ಸ್ವೀಕರಿಸಲ್ಪಟ್ಟು, ಅಭ್ಯಾಸಿಗಳು ಈ ಅಲ್ಪ ಸಮಯದ ತರಬೇತಿ ಘಟಕದಲ್ಲಿ ಎಲ್ಲ ವಿಷಯವನ್ನು ಒಳಗೊಂಡು ತಿಳುವಳಿಕೆ ಕೊಡುವುದರಲ್ಲಿ ಇದು ಉಪಯುಕ್ತವಾಗಿದೆ ಎಂದು ಹೇಳಿದರು. ಪ್ರಸ್ತುತಿಯ ವಿನ್ಯಾಸವೂ ಸಹ ಮೆಚ್ಚುಗೆಗೆ ಪಾತ್ರವಾಯಿತು.

### ಮಿರ್ಝಾಪುರ, ಉ.ಪ್ರ.

ವಲಯದ ಇನ್-ಛಾರ್ಜ್ ಆದ ಸೋ.ಶ್ಯಾಮ್ಜಿ ಮೆಹ್ರೋತ್ರ ಅವರ ವಿಶೇಷ ಪರಿಶ್ರಮದಿಂದ ಅಭ್ಯಾಸಿ ತರಬೇತಿ ಕಾರ್ಯಕ್ರಮವೊಂದು,ಪ್ರ. ಸೋ. ಸುರೇಶ ಕುಮಾರ್ ತ್ರಿಪಾಠಿಯವರ ಮನೆಯಲ್ಲಿ ಜೂನ್ 6ರಂದು ನಡೆಸಲಾಯಿತು. ಮಿರ್ಝಾಪುರ



ಕೇಂದ್ರದ 36 ಜನ ಅಭ್ಯಾಸಿಗಳು ಇದರಲ್ಲಿ ಭಾಗವಹಿಸಿ ಆಧ್ಯಾತ್ಮಿಕ ಲಾಭವನ್ನು ಪಡೆದುಕೊಂಡರು. ಕಾನ್ಪುರ ಕೇಂದ್ರದ ಸೋದರಿ ಅಂಜು ಶ್ರೀವಾಸ್ತವ್ ಅವರು ಮತ್ತು ಲಖ್ನೋ ಕೇಂದ್ರದ ಸೋದರ ಸುಲಭ್ ಸೋನಿ ಅವರು ಈ ಕಾರ್ಯಕ್ರಮದ ಮುಖ್ಯ ಪ್ರಸ್ತುತಕಾರರಾಗಿದ್ದರು.ಈ ಸಾಧನ ಪದ್ಧತಿಗೆ ಹೊಸದಾಗಿ ಸೇರಿ ತರಬೇತಿಹೊಂದುತ್ತಿರುವವರಿಗಾಗಿ ಆಯೋಜಿಸಿದ ಈ ಕಾರ್ಯಕ್ರಮದಲ್ಲಿ, ಯುವಕ ತಂಡದ ಸದಸ್ಯರು ಉತ್ಸಾಹದಿಂದ ಪಾಲ್ಗೊಂಡಿದ್ದರು ಮತ್ತು ಕಾರ್ಯಾಚರಣೆ ಮತ್ತು ವಿಧಿವಿಧಾನಗಳ ಬಗ್ಗೆ ವಿಶೇಷ ಆಸಕ್ತಿಯನ್ನು ತೋರಿಸಿದರು. ಸ್ವ-ಮೌಲ್ಯಮಾಪನೆಗೆ ಸಹಾಯವಾಗುವಂತೆ, ಅಭ್ಯಾಸಿಗಳು ಈ ಪದ್ಧತಿಯ ಎಲ್ಲ ವಿಷಯಗಳನ್ನು ವಿಶದವಾಗಿ ತಿಳಿದಿರಲು ಸಾಧನೆ, ಶುದ್ಧೀಕರಣ ಮತ್ತು ನಿರಂತರ ಸ್ಮರಣೆ, ಇವಕ್ಕೆ ಸಂಬಂಧಿತ ವಿಷಯಗಳ ಮೇಲೆ ವಿಶಿಷ್ಟವಾದ ಚರ್ಚೆಗಳು ಕೇಂದ್ರೀಕೃತವಾಗಿ ನಡೆದವು.

### ಹೊಸ ಅಭ್ಯಾಸಿಗಳಿಗಾಗಿ ಆಯೋಜಿಸಿದ ಕಾರ್ಯಕ್ರಮ, ಇಂದೋರ್, ಮ.ಪ್ರ.

ಇಂದೋರಿನಲ್ಲಿ ಭಾನುವಾರ ಮೇ 23ರಂದು, ಹೊಸ ಅಭ್ಯಾಸಿಗಳಿಗಾಗಿ ಒಂದು ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಸುಮಾರು 25 ಜನ ಹೊಸ ಅಭ್ಯಾಸಿಗಳು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಭಾಗವಹಿಸಿದವರನ್ನು ಎರಡು ಗುಂಪುಗಳಾಗಿ ವಿಭಜಿಸಲಾಯಿತು. ಪ್ರತಿಗುಂಪಿಗೆ ಪ್ರಶಿಕ್ಷಕ/ನಿಕಾಯದ ತಂಡವೊಂದು ಸಂಘಟಕರ ಪಾತ್ರವನ್ನು ವಹಿಸಿದ್ದರು. ಸಾಧನೆಯ ಪಾಲನೆಗೆ ಮೊದಲು, ವಿವಿಧ ವಿಷಯಗಳ ಸೂಕ್ಷ್ಮತೆಯನ್ನು ತಿಳಿದುಕೊಳ್ಳುವುದೇ ಅಭ್ಯಾಸಿಗಳಿಗಿದ್ದ ಸಾಮಾನ್ಯ ಸಮಸ್ಯೆಯಾಗಿತ್ತು.ಹತ್ತು ನಿಯಮಗಳನ್ನು ಅರ್ಥಮಾಡಿಕೊಳ್ಳುವುದರ ಮೇಲೆ ಗಮನಕೊಟ್ಟು, ಅದರ ಮೇಲೆ ಬಹಳ ಚರ್ಚೆಗಳಾದವು. ಮುಖ್ಯವಾಗಿ, ನಮ್ಮ ಪ್ರೀತಿಯ ಗುರುಗಳ ಸಹಾಯ ಇವೆಲ್ಲದರ ಮೇಲೆ ಇರುವ ಅನುಭವವನ್ನು ಭಾಗವಹಿಸಿದ ಅಭ್ಯಾಸಿಗಳೆಲ್ಲರೂ ಹಂಚಿಕೊಂಡರು.

### ಸಾಧನೆಯ ಬಗ್ಗೆ ಕಾರ್ಯಾಗಾರ, ತೆಂಕಾಸಿ, ತಮಿಳುನಾಡು

ಸಹಜ ಮಾರ್ಗ ಸಾಧನೆಯ ಬಗ್ಗೆ ಒಂದು ಕಾರ್ಯಾಗಾರವನ್ನು ಜೂನ್ 13ರಂದು, ತಮಿಳುನಾಡಿನ ತಿರುನೆಲ್ವೇಲಿ ಜಿಲ್ಲೆಯ ತೆಂಕಾಸಿಯಲ್ಲಿ ಆಯೋಜಿಸಲಾಯಿತು. ತೆಂಕಾಸಿಯು ಒಂದು ಚಿಕ್ಕ ಕೇಂದ್ರವಾಗಿದ್ದರೂ, ಅಲ್ಲಿನ 21 ಅಭ್ಯಾಸಿಗಳು ಪುಲಿಯಂಗುಡಿಯ 6 ಜನ ಅಭ್ಯಾಸಿಗಳೊಂದಿಗೆ ಸೇರಿ ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಅಭ್ಯಾಸಿಗಳನ್ನು ನಾಲ್ಕು ಗುಂಪುಗಳನ್ನಾಗಿ ವಿಭಜಿಸಿ, ಪ್ರತಿ ಗುಂಪಿಗೆ ಸಾಧನೆ ಮತ್ತು ಆಧ್ಯಾತ್ಮದ ಒಂದು ವಿಚಾರವನ್ನು ಪರಿಶೋಧನೆ ಮಾಡಲು ಕೊಡಲಾಯಿತು. ಕೊನೆಯಲ್ಲಿ, ಎಲ್ಲ ಅಭ್ಯಾಸಿಗಳಿಗೂ ಕಾಲಾವಧಿಯ ಪೂರ್ತಿ ಹೊತ್ತು, ತಾವು ಪೂಜ್ಯ ಗುರುಗಳ ಅನಂತವಾದ ಕೃಪೆಯಲ್ಲಿ ಮುಳುಗಿರುವಂತೆ ಅನ್ನಿಸಿತು. "ವ್ಹಿಸ್ಪರ್ಸ್" ಪುಸ್ತಕದಲ್ಲಿ ಪೂಜ್ಯ ಬಾಬೂಜಿಯವರು ಹೇಳಿರುವಂತೆ, "ಸಂತೋಷವು ಕೃಪೆಯನ್ನು ಆಕರ್ಷಿಸುತ್ತದೆ" ಎಂಬುದು ಸಾಬೀತಾಯಿತು. ಎಲ್ಲಾ ಅಭ್ಯಾಸಿಗಳಿಗೆ ಇದು ಒಂದು ಚಿಂತಾ-ಪ್ರಚೋದಕ ಕಾರ್ಯಾಗಾರವಾಗಿತ್ತು.

## 24 ನೇ ಜುಲೈ ಉತ್ಸವದ ಸಿದ್ಧತೆಗಳು ಲಖನೌ





24 ನೇ ಜುಲೈ 2010 ರಂದು ಲಖನೌನಲ್ಲಿ ನೆರವೇರಿಸಲಾಗುವ ಸದ್ಗುರುಗಳ 84 ನೇ ಹುಟ್ಟುಹಬ್ಬದ ಉತ್ಸವದ ಸಿದ್ಧತೆಗಳು ಭರದಿಂದ ಸಾಗುತ್ತಿವೆ.

ವಿಸ್ತಾರವಾದ ಲಖನೌ ಆಶ್ರಮದ ಆವರಣವು ಕಟ್ಟಡಗಳ ಕೆಲಸಗಳಿಂದ ತುಂಬಿಹೋಗಿದೆ. ವಸತಿ, ಅಡುಗೆಯ ಆವಾರ, ಮತ್ತು ಇನ್ನಿತರ ಅಂಗಡಿ ಮುಂತಾದವುಗಳಿಗಾಗಿ ಟೆಂಟ್ ಗಳು ತಯಾರಾಗುತ್ತಿವೆ. ಹೊಸದಾಗಿ ಧ್ಯಾನಮಂದಿರವನ್ನು ಕಟ್ಟಲಾಗಿದೆ. ರಸ್ತೆ ನಿರ್ಮಾಣದ ಕಾರ್ಯ ಪೂರ್ಣಗೊಳ್ಳುತ್ತಿದೆ ಹಾಗೂ ಹೊಸ ನಿವಾಸಸ್ಥಾನ ವಿಭಾಗದ ಕಟ್ಟಡವು ಬಹಳಷ್ಟುಮಟ್ಟಿಗೆ ಪೂರ್ಣಗೊಂಡಿದೆ. ಆಶ್ರಮದ ಆಕರ್ಷಣೆಯನ್ನು ಹೆಚ್ಚಿಸಲು ವಿಶಾಲವಾದ ಪ್ರವೇಶದ್ವಾರವನ್ನು ಕಟ್ಟಲಾಗಿದೆ. ಬಹು ಸಂಖ್ಯೆಯಲ್ಲಿ ಅಭ್ಯಾಸಿಗಳ ಆಗಮನವನ್ನು ನಿರೀಕ್ಷಿಸಿ ಕಟ್ಟಡ ಮತ್ತು ಸುಧಾರಣೆಯ ಕೆಲಸಗಳು ತ್ವರಿತ ಗತಿಯಿಂದ ಮಾಡಲಾಗುತ್ತಿದೆ. ನಿಗದಿಪಡಿಸಿದ ಕೆಲಸಗಳೆಲ್ಲವೂ ವೇಳೆಗೆ ಮುಂಚೆಯೇ ಪೂರ್ಣಗೊಳಿಸುವ ಉದ್ದೇಶದಿಂದ ಸ್ವಯಂಸೇವಕ ತಂಡಗಳು ಇಡೀ ರಾತ್ರಿ ಕೆಲಸ ಮಾಡುತ್ತಿವೆ.

## ಮೊದಲನೇಯ ವಾರ್ಷಿಕೋತ್ಸವ,ಚಿಕ್ಕನಾಯಕನಹಳ್ಳಿ ಕರ್ನಾಟಕ.

ದಿ. ಜೂನ್ 13, 2010 ರಂದು ಕರ್ನಾಟಕ ರಾಜ್ಯದಲ್ಲಿಯ ಚಿಕ್ಕನಾಯಕನಹಳ್ಳಿ ಹಾಗು ಹುಲಿಯಾರ್ ಕೇಂದ್ರಗಳು ತಮ್ಮ ಮೊದಲನೇಯ ವಾರ್ಷಿಕೋತ್ಸವವನ್ನು ಆಚರಿಸಿದವು. ಚಿಕ್ಕನಾಯಕನಹಳ್ಳಿಯಲ್ಲಿ ಈಗ 35 ಹಾಗು ಹುಲಿಯಾರ್ ನಲ್ಲಿ20 ಅಭ್ಯಾಸಿಗಳಿದ್ದಾರೆ. ಈ ಸಮಾರಂಭವನ್ನಾಚರಿಸಲು,ಇಲ್ಲಿನ ಸ್ಥಾನೀಯ ಅಭ್ಯಾಸಿಗಳು ಪೂರ್ಣದಿನದ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ತುಮಕೂರು,ತಿಪಟೂರು,ಚಿಕ್ಕನಾಯಕನಹಳ್ಳಿ ಹಾಗು ಹುಲಿಯಾರ್ ಮುಂತಾದ ಕೇಂದ್ರದಿಂದ ಸುಮಾರು 70 ಅಭ್ಯಾಸಿಗಳು, ಚಿಕ್ಕನಾಯಕನಹಳ್ಳಿ ಕೇಂದ್ರದಲ್ಲಿ ಕೂಡಿಕೊಂಡಿದ್ದರು." ಸಹಜಮಾರ್ಗ-ಜೀವನದ ದಾರಿ"ಎಂಬ ವಿಷಯವನ್ನು ತೆಗೆದುಕೊಂಡು,ಇದರಲ್ಲಿ ಸಾಧನೆಯ ವಿವಿಧ ಅಂಗಗಳಮೇಲೆ ಬೆಳಕು ಚೆಲ್ಲಲಾಯಿತು. ತದನಂತರ ಹೊಸದಾಗಿ ಸೇರಿಕೊಂಡ ಅಭ್ಯಾಸಿಗಳು ತಮ್ಮ ಅನುಭವಗಳನ್ನು ಹಂಚಿಕೊಂಡರು. ಈ ಕಾರ್ಯಕ್ರಮವು ಸಾಯಂಕಾಲದ ಸತ್ಸಂಗದ ನಂತರ ಸದ್ಗುರುಗಳ ನೆನಪುಗಳೊಂದಿಗೆ ಮುಕ್ತಾಯವಾಯಿತು. ನಂತರ ನಾವೆಲ್ಲರು ನಮ್ಮ ನಮ್ಮ ಕೇಂದ್ರ ಗಳಿಗೆ ವಾಪಸಾದೆವು.



## ಚಿಕ್ಕಮಗಳೂರು(ಕರ್ನಾಟಕ)ನಲ್ಲಿ ಒಕ್ಕೂಟ.



ದಿ. ಎಪ್ರಿಲ್ 8 ರಂದು ಪ್ರಶಿಕ್ಷಕ ಬಂಧುಗಳಾದ ಶ್ರೀ ಸತ್ಯನಾರಾಯಣರವರು, ಚಿಕ್ಕಮಗಳೂರಿನ ಸುಮಾರು 40 ಅಭ್ಯಾಸಿಗಳಿಗಾಗಿ ತಮ್ಮ ಮನೆಯಲ್ಲಿ ಒಕ್ಕೂಟವೊಂದನ್ನು ನೆರವೇರಿಸಿದರು."ದಿವ್ಯಲೋಕದ ಪಿಸುಮಾತುಗಳು"ನಲ್ಲಿಯ ಸಂದೇಶವನ್ನು ಕನ್ನಡದಲ್ಲಿ ಅನುವಾದಿಸಿ ಓದಲಾಯಿತು. ಭೋಜನದ ನಂತರ ಸಹೋದರಿ ನಾಗರತ್ನ, ಸಹೋದರರಾದ ರಾಮಚಂದ್ರ, ದಿನೇಶ ಗೋಖಲೆ, ಡಾ. ಸತೀಶ, ದೇವರಾಜ, ಸಹೋದರಿಯರಾದ ಪರಿಮಳಾ ಹಾಗು ರಾಜಮ್ಮನವರು ಮಾತನಾಡಿ ಸತತಸ್ಮರಣೆ ಹಾಗು ಯೋಗ್ಯರೀತಿಯ ಸಾಧನೆಗಳು ತಮ್ಮ ಜೀವನದಲ್ಲಿ ಹೇಗೆ ಸಹಾಯಕ ವಾದುವೆಂದು ತಮ್ಮ ಅನುಭವಗಳಿಂದ ವಿವರಿಸಿದರು.ಈ ಕೇಂದ್ರವನ್ನು ಬೆಳೆಸುವ ದೃಷ್ಟಿಯಿಂದ, ಭಾಗವಹಿಸಿದ ಅಭ್ಯಾಸಿಗಳ ಕೆಲವು ಸಲಹೆಗಳೊಂದಿಗೆ ಈ ಕೂಟದ ಮುಕ್ತಾಯವಾಯಿತು.ಈ ಕಾರ್ಯಕ್ರಮವು ಸಾಂಯಕಾಲ ಆರು ಗಂಟೆಗೆ ಮುಗಿದಾಗ ಯಾರಿಗೂ ಕಳೆದು ಹೋದ ಸಮಯದ ಅರಿವೇ ಇರಲಿಲ್ಲ.

## ವಡೋದರಾ(ಗುಜರಾತ) ನಲ್ಲಿಯ ಕ್ರೀಡಾದಿನ.

ದಿ.30, 2010 ರಂದು ವಡೋದರಾ ಕೇಂದ್ರದ ಸ್ವಯಂಸೇವಕರು ಮಕ್ಕಳಿಗಾಗಿ ಒಂದು ಕ್ರೀಡಾದಿನವನ್ನು ಆಯೋಜಿಸಿದರು. ಈ ಕಾರ್ಯಕ್ರಮವು ಆಶ್ರಮದ ಆವರಣದಲ್ಲಿ ಸತ್ಸಂಗದ ವೇಳೆಯಲ್ಲಿ ಜರುಗಿತು. 3 ರಿಂದ 15 ವರ್ಷ ವಯಸ್ಸಿನ ಸುಮಾರು .25-30 ಮಕ್ಕಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಅವರ ವಯಸ್ಸಿಗೆ ಅನುಗುಣವಾಗಿ ಮಕ್ಕಳನ್ನು ವಿಭಾಗಿಸಲಾಯಿತು. ಪೊಟ್ಯಾಟೋ ರೇಸ್( 3 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ) 100 ಮೀಟರ ಓಟ (5 ರಿಂದ 10 ವಯಸ್ಸಿನ ಮಕ್ಕಳಿಗಾಗಿ) ಮತ್ತು ಚಮಚ-ನಿಂಬೆ, ಹಾಗೂ ಗೋಣಿಚೀಲದ ಸ್ಪರ್ಧೆ(10 ರ ಮೇಲಿನ ಮಕ್ಕಳಿಗಾಗಿ) ನಿಯೋಜಿಸಲಾಗಿತ್ತು. ಮಕ್ಕಳು ಈ ಆಟ ಗಳಿಂದ ಒಳ್ಳೆಯ ಆನಂದವನ್ನನುಭವಿಸಿದರು. ಈ ಪ್ರಸಂಗವು ಮಕ್ಕಳಲ್ಲಿ ಒಂದಾಗಿರುವುದು, ಮೋಜು ಮತ್ತು ಹಿತಕರಸ್ಪರ್ಧೆಯ ಭಾವನೆಯನ್ನು ಹುಟ್ಟಿಸಿತು. ಪಾಲಕರು ಹಾಗು ಸ್ವಯಂಸೇವಕರು ಈ ಪ್ರಸಂಗದ ಆನಂದವನ್ನನುಭವಿಸಿದರು.



"ನೀವೇ ಪ್ರಯೋಗ, ಪ್ರಯೋಗಮಾಡುವವರೂ ನೀವೇ, ಹಾಗು ನೀವೇ ಆ ಪ್ರಯೋಗದ ಪರಿಣಾಮ ವಾಗುವಿರಿ. ಯಾವುದೇ ಕರ್ತವ್ಯಬದ್ಧತೆಯನ್ನು ನೀವು ಸದ್ಗುರುಗಳ ಸಲುವಾಗಿಯಾಗಲಿ ಅಥವಾ ಮಿಷನ್ನಿಗಾಗಿಯಾಗಲಿ ಮಾಡುತ್ತಿರುವೆನೆಂದು ನೀವು ತಿಳಿದಿರುವಿರಾದರೆ ಅದು ಮೂರ್ಖತನ. ಅಂತಹ ಯಾವುದೇ ಕರ್ತವ್ಯಬದ್ಧತೆ ಇಲ್ಲ. ಇದು ಯಾವಾಗಲು ನಿಮಗಾಗಿಯೇ ಇದ್ದ ಕರ್ತವ್ಯಬದ್ಧತೆ. ಇದನ್ನು ಯಾರು ನೆನಪಿನಲ್ಲಿಟ್ಟುಕೊಳ್ಳುವರೋ ಅವರು ಮುಂದೆ ಭವಿಷತ್ತಿನಲ್ಲಿ, ಜಾಣತನದಿಂದ ವರ್ತಿಸುವರು. ಯಾರು ಇದನ್ನು ನೆನಪಿನಲ್ಲಿಡದೆ ಮೂರ್ಖತನದಿಂದ ವರ್ತಿಸುವರೋ, ಅವರಿಗಾಗಿ ಭವಿಷ್ಯವು ಅತಿ ಉದಾಸೀನವಾಗಿರುತ್ತದೆಂದು ಹೇಳಲು ವಿಷಾದಿಸುತ್ತೇನೆ."

## ಗೌಹಾತಿ ಆಶ್ರಮ

ಗೌಹಾತಿಯು ಪೂರ್ವೋತ್ತರ ರಾಜ್ಯವಾದ ಅಸ್ಸಾಂನ ರಾಜಧಾನಿ. ಇಲ್ಲಿನ ಆಶ್ರಮ ಇತ್ತೀಚಿನ ಬೆಳವಣಿಗೆ ಯಾಗಿದ್ದು, ತೀನಸುಖಿಯಾ ಆಶ್ರಮವು ಪುರಾತನವೂ ಹಾಗು ಪೂಜ್ಯ ಬಾಬೂಜೀಮಹಾರಾಜರ ಭೇಟಿಯಿಂದ ಪುನೀತವಾಗಿದ್ದುದು ಆಗಿದೆ.

ಗೌಹಾತಿ ಕೇಂದ್ರವು ನಮ್ಮ ಸದ್ಗುರುಗಳನ್ನು 1993 ಇಸವಿಯ ಫೆಬ್ರುವರಿಯ10–12 ರಂದು ಸ್ವಾಗತಿಸುವ ಭಾಗ್ಯವನ್ನು ಪಡೆಯಿತು. ಆ ದಿನಗಳಲ್ಲಿ, ಸತ್ಸಂಗ ಹಾಗು ಇನ್ನಿತರ ಕಾರ್ಯಕ್ರಮಗಳು ಕಲ್ಯಾಣಭವನಗಳಲ್ಲಿ ಮಾಡಲಾಗುತ್ತಿತ್ತು. ಗುರುಗಳು, ಆಸಾಮವು ತಮಗೇನು ಹೊಸದಲ್ಲ. ತಾವು ತಮ್ಮ ಚಿಕ್ಕಂದಿನಲ್ಲಿ,ಭಾರತೀಯ ಅರಣ್ಯಖಾತೆಯಲ್ಲಿ ಸೇವೆ ಮಾಡುತಿದ್ದ ತಮ್ಮ ಚಿಕ್ಕಪ್ಪ ಭದ್ರನ್ ರವರನ್ನು ಭೇಟಿ ಮಾಡಲು ಬಂದಾಗ, ಕಾಲ್ನಡಿಗೆಯಿಂದ, ಕುದುರೆ ಹಾಗು ಆನೆಗಳಮೇಲೆ ಸವಾರಿಮಾಡಿ ಮೈಲುಗಟ್ಟಲೆ ಇಡೀ ಅಸ್ಸಾಂನಲ್ಲೆಲ್ಲ ತಿರುಗಿದುದಾಗಿ ಹೇಳುತ್ತಾರೆ. ಗೌಹಾತಿಯು ಅರಣ್ಯ ಪ್ರದೇಶವಾಗಿದ್ದು ಅದು ಒಂದು ದೊಡ್ಡ ನದಿಯನ್ನು ಹೊಂದಿದೆ ಎಂದು ನೆನೆಸಿಕೊಳ್ಳುತ್ತಾರೆ. ತಾವು ತಮ್ಮ ಯೌವನದಲ್ಲಿ ಜಗತ್ತಿನಸುತ್ತಲೂ, ಪ್ರವಾಸಮಾಡಿದಲ್ಲೆಲ್ಲಾ ಬಾಬೂಜೀಯವರ ಕಾರ್ಯವು ಭರದಿಂದ ಸಾಗುತ್ತಿದ್ದು,ಅದಕ್ಕೆ ಅಸ್ಸಾಂವು ಹೊರತಾಗಿಲ್ಲ,ಎಂದು ಹೇಳುತ್ತಾರೆ.ಅವರು ರಾಜ್ಯದ ಹೊರಗಿನಿಂದ ಬಂದ ಅಭ್ಯಾಸಿಗಳಿಗೆ ಸ್ಥಳೀಯ ಭಾಷೆಯನ್ನು ಕಲಿತು, ಇಲ್ಲಿಯ ಜನರನ್ನು ಮಿಶನ್ನಿಗೆ ಸೇರಿಸಿಕೊಂಡು ನಾವು ನಮ್ಮ ಗುರುಗಳಿಗಿತ್ತ ವಚನವನ್ನು ಪೂರೈಸಬೇಕಾಗಿರುವ ಮಹತ್ವವನ್ನು ಒತ್ತಿ ಹೇಳುತ್ತಾರೆ.

1998 ನೇ ಇಸವಿಯಲ್ಲಿ, 6500 ಚ.ಅ. ಆಕಾರದ ಪುಟ್ಟ ಭೂಭಾಗವೊಂದನ್ನು, ಕೆಲಭಾಗ ದೇಣಿಗೆ ರೂಪದಲ್ಲಿ ಮತ್ತು ಕೆಲಭಾಗ ಸ್ಥಾನೀಯ ಅಭ್ಯಾಸಿಗಳು ಖರೀದಿಸಿ ಪಡೆದು ಕೊಂಡಿದ್ದು, ಅದರಲ್ಲಿ ಹುಲ್ಲು ಹಾಗು ಬಿದಿರಿನ ಒಂದು ಸುಂದರವಾದ ತಾತ್ಪೂರ್ತಿ ಕುಟೀರವನ್ನು ಕಟ್ಟಲಾಯಿತು. ಇದಕ್ಕೂ ಮೊದಲು ಮೈತ್ರಿಮಂದಿರವೆಂಬ ಅನಾಥಾಲಯದಲ್ಲಿ,ಸತ್ಸಂಗ ಮಾಡಲಾಗುತ್ತಿತ್ತು. 2009 ನೇ ಸಾಲಿನಲ್ಲಿ ಭಾಗಶ ಶಾಶ್ವತ ಕಟ್ಟಡವನ್ನು ರಚಿಸಲಾಗಿದ್ದು, ಈಗ ಇದು 1600 ಚ.ಅ.ಆಕಾರದ ಧ್ಯಾನಮಂದಿರವನ್ನು ಹೊಂದಿದ್ದು, ಮೊದಲಿಗಿಂತಲೂ ವಿಸ್ತೀರ್ಣವಾಗಿದ್ದು, ರವಿವಾರದ ಸತ್ಸಂಗಕ್ಕೆ ಹಾಜರಾಗಿರುವ ಸುಮಾರು 100 ಅಭ್ಯಾಸಿಗಳಿಗೆ ಅನುಕೂಲವಾಗಿ ಹಿಡಿಸುವಂತಿದೆ. ಗುರುಗಳಿಗಾಗಿ ಸುಸಜ್ಜಿತ ಕೋಣೆ, ದೊಡ್ಡದಾದ ಅಡುಗೆಮನೆ, ಮಕ್ಕಳಕೇಂದ್ರ, ರಕ್ಷಕರಕೋಣೆ, ಅತಿಥಿಗ್ರಹ ಹಾಗು ಕಟ್ಟಡದ ಮೂರು ಕಡೆಗೂ ಸುಂದರವಾದ ಹುಲ್ಲುಹಾಸನ್ನು ಹೊಂದಿದೆ. ಇದರ ಪರಿಸರವು, ಮಿಶನ್ನಿನ ಸಮಾರಂಭಗಳನ್ನೂ ಅಭ್ಯಾಸಿ ಪ್ರಶಿಕ್ಷಣ ಕಾರ್ಯಕ್ರಮಗಳನ್ನೂ ಕ್ಷೇತ್ರೀಯ ಸ್ಥರದಲ್ಲಿ ಹಮ್ಮಿಕೊಳ್ಳಲು ಉಪಯುಕ್ತವಾಗಿದೆ. ಮಿಶನ್ನಿನ ಅಧಿಕಾರಿಗಳಾದ ಸಹೋದರ ಯು.ಎಸ್.ಬಾಜಪೈ ಯವರು 2004 ಇಸವಿಯಿಂದ ಅಸ್ಸಾಂ ಮತ್ತು ಪೂರ್ವೋತ್ತರ ರಾಜ್ಯಗಳಲ್ಲಿ ಸಾಕಷ್ಟು ಪ್ರವಾಸಗಳನ್ನು ಮಾಡುತ್ತಿದ್ದಾರೆ. 2007 ರಲ್ಲಿ ಸಹೊದರಿ ಸೀತಾ ಕುಂಚಿದಪಾದಮ್ ರವರು ಅಸ್ಸಾಂ ಮತ್ತು ಪೂರ್ವೋತ್ತರ ರಾಜ್ಯಗಳಿಗಾಗಿ VBSE ಕಾರ್ಯಶಾಲೆ ಯನ್ನು ಆಯೋಜಿಸಿದರು. ಮತ್ತು 2008 ರಲ್ಲಿ ಸಹೋದರ ಎ.ಪಿ.ದುರ್ರೈರವರು ಗೌಹಾತಿ ರಿಫೈನರಿಯಲ್ಲಿ ಧ್ಯಾನ ಪ್ರಶಿಕ್ಷಣ ಕಾರ್ಯಕ್ರಮವನ್ನು ಕೈಗೊಂಡರು.

ಈಗಿನ ಆಶ್ರಮವು ಸಧ್ಯದ ಅಭ್ಯಾಸಿಗಳ ಸಂಖ್ಯೆಗೆ ಸಾಕಷ್ಟು ದೊಡ್ಡದಾಗಿದ್ದು, ಇನ್ನೂ ಬೆಳವಣಿಗೆಗೆ ಅವಕಾಶವಿದ್ದಾಗಲೂ ಮುಂದಿನ ಬೆಳವಣಿಗೆಯನ್ನು ನಿರೀಕ್ಷಿಸಿ, ಹಾಗು ಅಸ್ಸಾಂ ರಾಜ್ಯಕ್ಕೆ ಕ್ಷೇತ್ರೀಯ ಆಶ್ರಮದ ಸಾಧ್ಯತೆಯನ್ನು ಗಮನಿಸಿ, 2009 ನೇ ಸಾಲಿನಲ್ಲಿ ವಿಮಾನನಿಲ್ದಾಣದ ಹತ್ತಿರದ ಅತಿ ದೊಡ್ಡದಾದ ಭೂಭಾಗವೊಂದನ್ನು ಕೊಂಡುಕೊಳ್ಳಲಾಗಿದೆ. ಈ ಕ್ಷೇತ್ರೀಯ ಆಶ್ರಮ ಭೂಭಾಗವು ಗ್ರಹನಿರ್ಮಾಣ ಸಂಸ್ಥೆಯಿಂದ ಮಂಜೂರಾತಿಯನ್ನು ಪಡೆದಿದ್ದು ಗುರುಗಳು ಇದಕ್ಕೆ ಪ್ರೀತಿಯಿಂದ "ಸಹಜಪುರಮ್ ಸೊಸೈಟಿ" ಎಂದು ಹೆಸರಿಸಿದ್ದಾರೆ.

ಕ್ಷೇತ್ರಿಯ ಆಶ್ರಮದ ರೂಪ ತಾಳಲು ಇನ್ನೂ ಬಹು ದೂರದ ಪ್ರವಾಸವಾಗಿದ್ದು, ನಾವು ಸ್ಥಳೀಯ ಅಭ್ಯಾಸಿಗಳಿಗೆ ಈ ನಿಟ್ಟಿನಲ್ಲಿ ಶೀಘ್ರ ಯಶಸ್ಸನ್ನು ಹಾರೈಸುತ್ತೇವೆ.










**To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org**

© 2009 Shri Ram Chandra Mission ("SRCM"). All rights reserved. "Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.